


# ಗೊಮ್ಮಟವಾಣಿ

44ನೇ ವರ್ಷದ ಪ್ರಕಾಶನದಲ್ಲಿ




ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ದಿನಾಂಕ : 15.10.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ವೀರಸಂವತ್ : 2549 ಪುಟಗಳು : 6

ಸಂಪುಟ : 17 ಸಂಚಿಕೆ : 20 ಸೋಪಾನ : 1047 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23


## ಜಿನಭಾಷಿತ

ಜಹ ಸಲಿಲೇಣ ಣ ಲಿಪ್ಪಇ, ಕಮಲಿಣಿಪತ್ತಂ ಸಹಾವಪಯಡೀಏ ।
ತಹ ಭಾವೇಣ ಣ ಲಿಪ್ಪಇ, ಕಸಾಯವಿಸಏಹಿಂ ಸಪ್ಪುರಿಸೋ ॥ ಸಮಣಸುತ್ತಂ, ಸಮ್ಯಕ್ತ್ವಸೂತ್ರ-9

ಯಾವ ರೀತಿ ಸ್ವಭಾವದಿಂದ ತಾವರೆಯ ಎಲೆಯು ನೀರಿಗೆ ಅಂಟಿಕೊಳ್ಳುವುದಿಲ್ಲ. ಅದೇ ರೀತಿ ಸಮ್ಯಕ್ತ್ವದ ಭಾವನೆಯುಳ್ಳ ಸತ್ಪುರುಷರಿಗೆ ಕಷಾಯ ವಿಷಯಗಳು ಅಂಟಿಕೊಳ್ಳುವುದಿಲ್ಲ.

## ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ ದರ್ಶನದ ಸಮಯ :
ಬೆಳಗ್ಗೆ 6-30 ರಿಂದ ಸಂಜೆ 6-00ರವರೆಗೆ
ಪೂಜಾ ಸಮಯ
ಬೆಳಗ್ಗೆ 8-00 ರಿಂದ ಬೆಳಗ್ಗೆ 10-00ರವರೆಗೆ
ದೂರವಾಣಿ : 9008954636

: ಶ್ರೀಮಠ ದರ್ಶನ ಸಮಯ :
ಬೆಳಗ್ಗೆ 6-30 ರಿಂದ ರಾತ್ರಿ 8-00ರವರೆಗೆ
ಪೂಜಾ ಸಮಯ
ಬೆಳಗ್ಗೆ 7-00 ರಿಂದ ಬೆಳಗ್ಗೆ 9-00ರವರೆಗೆ
ದೂರವಾಣಿ : 9844143722

: ಅಕ್ಷಯ ಶ್ರಾವಕ ಸತ್ಕಾರ ಭೋಜನಾಲಯದ ಸಮಯ :
ಉಪಹಾರ : ಬೆಳಗ್ಗೆ 08.00 ರಿಂದ 09.30ರವರೆಗೆ
ಭೋಜನ : 10.30 ರಿಂದ ಮಧ್ಯಾಹ್ನ 03.00
ಸಂಜೆ : 04.30 ರಿಂದ 06.30 ರವರೆಗೆ
ಹೊರೆಕಾಣಿಕೆ ಸ್ವೀಕರಿಸಲಾಗುವುದು


ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ ನಿಮ್ಮ ಮನೆಗೆ ತಲುಪುತ್ತಿಲ್ಲವೇ....?
ಸಂಪರ್ಕಿಸಿ : 8660118443
ವಾರ್ಷಿಕ ಚಂದಾ : ರೂ. 250-00
ಆಜೀವ ಸದಸ್ಯತ್ವ : ರೂ. 2,500-00

ಶ್ರೀಕ್ಷೇತ್ರಕ್ಕೆ ಆಹಾರ, ಔಷಧ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು

Paytm G Pay PhonePe


## ದೀಕ್ಷಾ ದಿವಸ ಕಾರ್ಯಕ್ರಮ



ಶ್ರವಣಬೆಳಗೊಳ, ಅ.3 :ಪ.ಪೂ. ಮುನಿಶ್ರೀ 108 ಪಾವನಕೀರ್ತಿ ಮುನಿಮಹಾರಾಜರ ದೀಕ್ಷಾ ದಿವಸದ ಸಂದರ್ಭದಲ್ಲಿ ಪೂ. ಆರ್ಯಿಕಾವೃಂದ ಹಾಗೂ ಪೂ. ಶ್ರೀಗಳವರು ಪಾದಪೂಜೆ ನೆರವೇರಿಸಿ, ಅರ್ಘ್ಯ ಸಮರ್ಪಿಸಿದರು.

## ದಶಲಕ್ಷಣ ಮಹಾಪರ್ವ ಹಾಗೂ ಕ್ಷಮಾವಾಣಿ ಪ್ರಯುಕ್ತ ಬೃಹತ್ ಶೋಭಾಯಾತ್ರೆ




ಶ್ರವಣಬೆಳಗೊಳ. ಅ.1: ದಶಲಕ್ಷಣ ಮಹಾಪರ್ವ ಹಾಗೂ ಕ್ಷಮಾವಾಣಿ ಪ್ರಯುಕ್ತ ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಬೃಹತ್ ಶೋಭಾಯಾತ್ರೆ ನೆರವೇರಿತು. ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು, ಕನಕಗಿರಿ ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಹಾಗೂ ಅರಹಂತಗಿರಿ ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಡಾ. ಧವಲಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಚಾಲನೆ ನೀಡಿದರು. ಸ್ವರ್ಣ ರಥದಲ್ಲಿ 14ನೇ ತೀರ್ಥಂಕರರಾದ ಭ. ಶ್ರೀ ಅನಂತನಾಥಸ್ವಾಮಿ, ಯಕ್ಷ-ಯಕ್ಷಿ, ಶ್ರೀಬ್ರಹ್ಮ-ದೇವರನ್ನು ಪ್ರತಿಷ್ಠಾಪಿಸಿ, ಜಿನವಾಣಿ ಶಾಸ್ತ್ರಗಳನ್ನು ರಜತ ಪಲ್ಲಕ್ಕಿಯಲ್ಲಿ ಅಲಂಕರಿಸಿ ಪೂರ್ಣಕುಂಭ, ಮಂಗಳವಾದ್ಯ, ಚಿಟ್ಟಿಮೇಳ, ಚಂಡೆವಾದ್ಯ, ಮರದ ಆನೆಗಳೊಂದಿಗೆ ಶ್ರೀಮಠದಿಂದ ಭಂಡಾರಿ ಬಸದಿ ಪ್ರದಕ್ಷಿಣೆಯೊಂದಿಗೆ ಜೈನ ಬೀದಿ, ಮೈಸೂರು ರಸ್ತೆ, ವಿದ್ಯಾನಂದ ನಿಲಯ ಮಾರ್ಗವಾಗಿ ಬೆಂಗಳೂರು ರಸ್ತೆ ಮೂಲಕ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನೆರವೇರಿತು. ಮಂಗಳ ಕಲಶ, ಧರ್ಮಧ್ವಜ ಹಿಡಿದ ವಿದ್ಯಾರ್ಥಿಗಳು ಹಾಗೂ ನೂರಾರು ಶ್ರಾವಕ-ಶ್ರಾವಕಿಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.





## ಸಹಸ್ರಕೂಟ ಜಿನಬಿಂಬಕ್ಕೆ ಮಹಾಭಿಷೇಕ




ಶ್ರವಣಬೆಳಗೊಳ. ಅ. 1 : ದಶಲಕ್ಷಣ ಮಹಾಪರ್ವ ಸಮಾರೋಪದ ಕ್ಷಮಾವಾಣಿ ಹಾಗೂ ಅನಂತನೋಂಪಿ ಅಂಗವಾಗಿ ಭಾನುವಾರ ಶ್ರವಣಬೆಳಗೊಳದ ಭಂಡಾರಿ ಬಸದಿಯಲ್ಲಿ ಆಯೋಜಿಸಿದ್ದ ಸಹಸ್ರಕೂಟ ಜಿನಬಿಂಬಕ್ಕೆ ತಮಿಳುನಾಡಿನ ಅರಹಂತಗಿರಿ ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಧವಲಕೀರ್ತಿ ಭಟ್ಟಾರಕ ಸ್ವಾಮೀಜಿಯವರು, ಮೈಸೂರು ಜಿಲ್ಲೆಯ ಕನಕಗಿರಿ ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಹಾಗೂ ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಸಹಸ್ರಕೂಟ ಜಿನಬಿಂಬಕ್ಕೆ ಅಭಿಷೇಕ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಪ.ಪೂ. ತ್ಯಾಗಿಗಳು ಹಾಗೂ ಪೂ. ಮಾತಾಜೀಯವರು ಪಾವನ ಸಾನ್ನಿಧ್ಯ ವಹಿಸಿದ್ದರು.

## ಅರಿಹಂತಗಿರಿ ಶ್ರೀಗಳವರಿಗೆ ಭಟ್ಟಾರಕರತ್ನ ಪ್ರದಾನ

ಶ್ರವಣಬೆಳಗೊಳ. ಆ. 1 : ಅರಿಹಂತಗಿರಿ ಜೈನ ಮಠದ ಪೀಠಾಧ್ಯಕ್ಷರಾದ ಪ.ಪೂ. ಸ್ವಸ್ತಿಶ್ರೀ ಧವಲಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಪಟ್ಟಾಭಿಷಿಕ್ತರಾಗಿ 25 ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಶ್ರೀಕ್ಷೇತ್ರ ಶ್ರವಣಬೆಳಗೊಳ ಜೈನ ಮಠದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಹಾಗೂ ಸಮಸ್ತ ಭಟ್ಟಾರಕರ ವತಿಯಿಂದ 'ಭಟ್ಟಾರಕ ರತ್ನ' ಎಂಬ ಉಪಾದಿಯೊಂದಿಗೆ ರಜತ ಕಳಶ ಹಾಗೂ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.



## ಚಾರುಶ್ರೀ ವಾಣಿ



ಮನುಷ್ಯನಲ್ಲಿ ಜ್ಞಾನದ ಶಕ್ತಿಯಿದ್ದು, ಅದನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮವೇ ಶಿಕ್ಷಣವಾಗಿದೆ. ಮಾನವನೂ ಸಹ ಸಂಪನ್ಮೂಲಗಳಲ್ಲಿ ಒಂದಾಗಿರುವುದರಿಂದ ಆತನ ಸೂಕ್ತ ಬಳಕೆಯಾಗಬೇಕು. ಹಾಗೆ ಆಗಬೇಕಾದರೆ ಶಿಕ್ಷಣವು ನೈತಿಕತೆಯಿಂದ ಕೂಡಿರಬೇಕು.

– ಪ.ಪೂ. ಜಗದ್ಗುರು ಕರ್ಮಯೋಗಿ
ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

## ಅಭಿನವ ಚಾರುಶ್ರೀ ನುಡಿ



### ಜೀವಾತ್ಮ ಪರಮಾತ್ಮನಾಗುವುದು ಹೇಗೆ

ಪ್ರತಿಯೊಂದು ಜೀವಿಯ ಗುರಿಯು ಮೋಕ್ಷವನ್ನು ಸಾಧಿಸುವುದೇ ಆಗಿದೆ. ಆತ್ಮನನ್ನು ಪರಮಾತ್ಮವನ್ನಾಗಿಸುವುದೇ ಈ ತತ್ವದಲ್ಲಿ ಅಡಗಿದೆ. ಆತ್ಮವು ಕಲ್ಯಾಣವನ್ನು ಸಾಧಿಸದಿದ್ದರೆ, ಸಂಸಾರದಲ್ಲಿಯೇ ಇದ್ದರೆ ಅದು ಚತುರ್ಗತಿ ಭ್ರಮಣೆಯಲ್ಲಿ ತಿರುಗುತ್ತಿರುತ್ತದೆ. ಎಲ್ಲಿಯವರೆಗೆ ಸಮ್ಯಕ್ತ್ವ ಪ್ರಾಪ್ತಿಯಾಗು-ವುದಿಲ್ಲವೋ, ರತ್ನತ್ರಯುಗಳು ಪ್ರಾಪ್ತಿಯಾಗುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಆತ್ಮವು ಪರಮಾತ್ಮನಾಗಲೂ ಸಾಧ್ಯವೇ ಇಲ್ಲ.

ಆತ್ಮನಲ್ಲಿ ಮೂರು ರೀತಿಯಾದ ಅವಸ್ಥೆಗಳು ಕಂಡುಬರುತ್ತದೆ. ಬಹಿರಾತ್ಮ, ಅಂತರಾತ್ಮ, ಪರಮಾತ್ಮ. ಸಂಸಾರಿ ಜೀವವು ಆಚೇತನ ಪುದ್ಗಲ ರೂಪದ ವಿನಾಶ ಹೊಂದುವ ಪದಾರ್ಥಗಳಲ್ಲಿ ಆತ್ಮಬುದ್ಧಿ ಹೊಂದಿರುತ್ತದೋ ಅಂದರೆ ಎಲ್ಲಿಯುವರೆಗೆ ಮಿಥ್ಯಾತ್ವ ಅವಸ್ಥೆಯುಲ್ಲಿ ಇರುತ್ತದೋ ಅಲ್ಲಿಯವರೆಗೆ ಅದು ಬಹಿರಾತ್ಮ ಎನಿಸಿಕೊಳ್ಳುತ್ತದೆ.

ಯಾವಾಗ ಆ ಸಂಸಾರಿ ಜೀವನ ಶರೀರಾದಿಯಲ್ಲಿ ಆತ್ಮ ಬುದ್ಧಿಯ ತ್ಯಾಗ ಮತ್ತು ಮಿಥ್ಯಾತ್ವದ ವಿನಾಶವಾಗುತ್ತದೋ ಆ ಆತ್ಮ ಸಮ್ಯಗ್ದೃಷ್ಠಿಯಾಗುತ್ತದೆ. ಆಗ ಅದನ್ನು ಅಂತರಾತ್ಮ ಎನ್ನಲಾಗುತ್ತದೆ.

ಆತ್ಮ ಗುಣಗಳಿಗೆ ಘಾತ ಮಾಡುವ ಜ್ಞಾನಾವರಣ, ದರ್ಶನಾವರಣ, ಮೋಹನೀಯ ಮತ್ತು ಅಂತರಾಯ ಎಂಬ ನಾಲ್ಕು ರೀತಿಯ ಘಾತಿಕರ್ಮಗಳನ್ನು ನಾಶಮಾಡಿ ಆತ್ಮನ ಅನಂತ ಚತುಷ್ಟಯ ರೂಪದ ಶಕ್ತಿಗಳನ್ನು ಆತ್ಮನಲ್ಲಿ ವಿಕಸನಗೊಳ್ಳುತ್ತದೋ ಅಂತಹ ಆತ್ಮನನ್ನು ಪರಮಾತ್ಮ ಎನ್ನಲಾಗುತ್ತದೆ ಅಂದರೆ ಆತ್ಮನ ಪರಮ ಪರಿಶುದ್ಧ ಅವಸ್ಥೆಗೆ ಪರಮಾತ್ಮ ಎನ್ನಲಾಗುತ್ತದೆ.

ಭವ್ಯರೇ ಆಗಲಿ ಅಭವ್ಯರೇ ಆಗಲಿ ಎಲ್ಲರಲ್ಲಿಯೂ ಈ ಮೂರು ರೀತಿಯ ಆತ್ಮದ ಅವಸ್ಥೆಗಳು ಇರುತ್ತವೆ. ಅವುಗಳಲ್ಲಿ ಪರಮವುಳ್ಳ ಆತ್ಮವು ಹಾಲಿನಲ್ಲಿ ತುಪ್ಪ ಅಡಗಿದಂತೆ ಇರುತ್ತದೆ. ಹಾಲನ್ನು ಹೆಪ್ಪುಹಾಕಿ ಬೆಣ್ಣೆ ತೆಗೆದು ಕಾಯಿಸಿದಾಗ ತುಪ್ಪವು ದೊರೆಯುವಂತೆ ಆತ್ಮನನ್ನು ಸತ್ಕರ್ಮಗಳಿಂದ ಹಸನುಗೊಳಿಸಿ, ವಿಕಾಸಗೊಳಿಸಿ ಪುಣ್ಯಬಂಧವಾದಾಗ ಆ ಆತ್ಮವು ಪರಮಾತ್ಮ ಸ್ವರೂಪಿಯಾಗುತ್ತದೆ.

ಹಾಗಾಗಿ ಪ್ರತಿಯೊಂದು ಆತ್ಮವು ಪರಮಾತ್ಮನನ್ನಾಗಿಸುವ ಹಾದಿಯಲ್ಲಿ ಸಾಗಬೇಕು. ಸಮ್ಯಕ್ತವನ್ನು ಪ್ರಾಪ್ತಿ ಮಾಡಿಕೊಳ್ಳಬೇಕು. ಮೋಕ್ಷ ಮಾರ್ಗದಲ್ಲಿ ಸಾಗಿ ಅಂತರಾತ್ಮನ ಅವಸ್ಥೆಯಲ್ಲಿ ಸ್ಥಿರನಾಗಿ ಆತ್ಮನ ಸ್ವಾಭಾವಿಕ ವೀತರಾಗಮಯ ಪರಮಾತ್ಮಾ-ವಸ್ಥೆಯನ್ನು ತಲುಪಬೇಕು. ಆಗಮಾತ್ರ ಜೀವಾತ್ಮನು ತನ್ನ ಗುರಿಯನ್ನು ತಲುಪಲು ಸಾಧ್ಯ. ಅದೇ ಹಾದಿಯಲ್ಲಿ ಪ್ರತಿಯೊಂದು ಜೀವಿಯು ಸಾಗಲಿ ಸಕಲರಿಗೂ ಆತ್ಮಕಲ್ಯಾಣದ ಹಾದಿ ಸುಗಮವಾಗಲಿ ಪ್ರಪಂಚದಲ್ಲಿನ ಪ್ರತಿಯೊಂದು ಜೀವಿಯು ಪರಸ್ಪರ ಉಪಸರ್ಗ ಒಳಗಾಗದೇ ಉಪಕಾರಿಯಾಗಿರಲಿ.

– ಪ.ಪೂ. ಜಗದ್ಗುರು
ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

## ಶ್ರೀಕ್ಷೇತ್ರದಲ್ಲಿ ಸಿದ್ಧಚಕ್ರ ಮಹಾಮಂಡಲ ವಿಧಾನ




**ಶ್ರವಣಬೆಳಗೊಳ, ಅ.9** : ಶ್ರೀಕ್ಷೇತ್ರದಲ್ಲಿ ಪ.ಪೂ. ಮುನಿಶ್ರೀ ಆದಿಸಾಗರ ಮಹಾರಾಜರು ಮತ್ತು ಪ.ಪೂ. ಮುನಿಶ್ರೀ ನಿರ್ದೋಷ ಸಾಗರ ಮಹಾರಾಜರ ಸಾನ್ನಿಧ್ಯದಲ್ಲಿ ಅಕ್ಟೋಬರ್ 9 ರಿಂದ 17ರವರೆಗೆ ಎಂಟು ದಿನಗಳ ಸಿದ್ಧಚಕ್ರ ಮಹಾಮಂಡಲ ವಿಧಾನವು ನೆರವೇರುತ್ತಿದೆ.

## ಶ್ರೀಕ್ಷೇತ್ರದ ಜೈನಮಠದ ಬಸದಿ ಜೀರ್ಣೋದ್ಧಾರ ಮತ್ತು ರಜತ ಕವಚ ಹಾಗೂ ಚೌಕಟ್ಟು ಅಳವಡಿಕೆ ಕಾರ್ಯ ಪ್ರಗತಿಯಲ್ಲಿ




ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ತಮ್ಮ ದೀಕ್ಷಾಗುರುಗಳಾದ ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಆಶಯದಂತೆ ಶ್ರೀಮಠದಲ್ಲಿ ಎರಡು ಗರ್ಭಗೃಹದ ಬಾಗಿಲಿಗೆ ರಜತ ಕವಚ, ಚೌಕಟ್ಟು, ಪ್ರಭಾವಳಿ, ಭಾಮಂಡಲ, ತ್ರಿಮೇಕಲಾ ಪೀಠ ಮಾಡಿಸಲು ಶುಭಾರಂಭ ಮಾಡಿರುತ್ತಾರೆ ಹಾಗೂ ಶ್ರೀಕ್ಷೇತ್ರ ಜೈನಮಠಕ್ಕೆ ಸೇರಿದ ಬಸದಿಗಳು, ಕಟ್ಟಗಳ ಜೀರ್ಣೋದ್ಧಾರ ಕಾರ್ಯ ಪ್ರಗತಿಯಲ್ಲಿದೆ. ಈ ಶುಭ ಸಂಕಲ್ಪದ ಕಾರ್ಯಕ್ಕೆ ಭಕ್ತಾಧಿಗಳು ತನು, ಮನ, ಧನ ಸಹಯೋಗದೊಂದಿಗೆ ಬೆಳ್ಳಿ ದಾನ ನೀಡಿ ಪುಣ್ಯಕಾರ್ಯದಲ್ಲಿ ಭಾಗಿಯಾಗಬಹುದು.



ರಜತ ಕವಚ ಹಾಗೂ ಚೌಕಟ್ಟಿನ ವಿನ್ಯಾಸ

**ದಾನ ನೀಡಲು ಬ್ಯಾಂಕ್ ಖಾತೆಯ ವಿವರ**

Account Name: SDJMI Managing Committee Trust (R) Development A/c
A/c No : 64207078669
Bank : State Bank of India
Branch : Shravanabelagola
IFSC Code : SBIN0040369

ಹೆಚ್ಚಿನ ಮಾಹಿತಿಗಾಗಿ : **8431560480**

## ಅಖಿಲ ಭಾರತೀಯ ದಿಗಂಬರ ಜೈನ ಮಹಿಳಾ ಮಹಾಸಭಾ ಅಧ್ಯಕ್ಷೆ ಶ್ರೀಮತಿ ಸರಿತಾ ಎಂ.ಕೆ. ಜೈನ್‌ರವರು ಶ್ರೀಕ್ಷೇತ್ರಕ್ಕೆ ಭೇಟಿ



**ಶ್ರವಣಬೆಳಗೊಳ, ಅ.10** : ಅಖಿಲ ಭಾರತ ವರ್ಷೀಯ ದಿಗಂಬರ ಜೈನ ತೀರ್ಥಕ್ಷೇತ್ರ ಕಮಿಟಿಯ ಪೂರ್ವ ಅಧ್ಯಕ್ಷರು ಹಾಗೂ ಗೊಮ್ಮಟೇಶ್ವರ ಭ. ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಮಹೋತ್ಸವ ಸಮಿತಿ–2018ರ ರಾಷ್ಟ್ರೀಯ ಅಧ್ಯಕ್ಷೆ ಚೆನ್ನೈನ ಶ್ರೀಮತಿ ಸರಿತಾ ಎಂ.ಕೆ. ಜೈನ್‌ರವರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಆಶೀರ್ವಾದ ಪಡೆದರು.

## ವಿಶೇಷ ಉಪನ್ಯಾಸ



**ಶ್ರವಣಬೆಳಗೊಳ, ಸೆ. 30** : ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ–ಯಲ್ಲಿ ಆಲಗೂರಿನ ಹಿರಿಯ ವಿದ್ವಾಂಸರಾದ ಪ್ರೊ ಬಿ. ಪಿ. ನ್ಯಾಮಗೌಡ ಅವರು ಕನ್ನಡ ಮತ್ತು ಪ್ರಾಕೃತ ಭಾಷೆಯ ಅಂತಸಂಬಂಧ ವಿಷಯದ ಮೇಲೆ ವಿಶೇಷ ಉಪನ್ಯಾಸವನ್ನು ನೀಡಿದರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ನಿರ್ದೇಶಕರಾದ ಡಾ.ಪ್ರೊ ಜಯಕುಮಾರ ಉಪಾಧ್ಯೆರವರು ವಹಿಸಿದ್ದರು. ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಶ್ರೀಕ್ಷೇತ್ರದ ಬಂಡಾರಿ ಬಸದಿಯಲ್ಲಿ ಅಖಂಡ ಣಮೋಕಾರ ಮಂತ್ರ ಪಠಣ







**ಶ್ರವಣಬೆಳಗೊಳ, ಅ. 3** : ವಿಶ್ವಶಾಂತಿ ಹಾಗೂ ಲೋಕಕಲ್ಯಾಣಕ್ಕಾಗಿ ಪೂ. ಗಣಿನೀ ಆರ್ಯಿಕಾ ಶ್ರೀ 105 ವಿಶಿಷ್ಟಮತಿ ಮಾತಾಜಿಯವರ ಅಪೇಕ್ಷೆಯಂತೆ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಶ್ರೀಕ್ಷೇತ್ರದ ಭಂಡಾರಿ ಬಸದಿಯಲ್ಲಿ ಅಕ್ಟೋಬರ್ 3 ರಿಂದ 18ರವರೆಗೆ ಅಖಂಡ ಣಮೋಕಾರ ಮಂತ್ರ ಪಠಣ ಕಾರ್ಯಕ್ರಮವು ಜರುಗುತ್ತಿದೆ. ಶ್ರವಣಬೆಳಗೊಳದ ಶ್ರೀಕೂಷ್ಮಾಂಡಿನಿ ಮಹಿಳಾ ಸಮಾಜ, ಶ್ರವಣಬೆಳಗೊಳ ದಿಗಂಬರ ಜೈನ ಸಮಾಜ, ಎಸ್.ಡಿ.ಜೆ.ಎಂ.ಐ ಎಂ.ಸಿ. ಟ್ರಸ್ಟ್ (ರಿ) ಸಿಬ್ಬಂದಿ ವರ್ಗದವರು ಹಾಗೂ ಶ್ರವಣಬೆಳಗೊಳದ ಶ್ರೀ ನೇಮಿನಾಥ ತೀರ್ಥಂಕರ ಜೈನ ಯುವ ಮೋರ್ಚಾ, ಚನ್ನರಾಯಪಟ್ಟಣದ ಜ್ವಾಲಾಮಾಲಿನಿ ಮಹಿಳಾ ಸಮಾಜ, ಮೈಸೂರಿನ ಪದ್ಮಶ್ರೀ ಮಹಿಳಾ ಸಮಾಜ, ತುಮಕೂರಿನ ಪದ್ಮಾಂಬ ಮಹಿಳಾ ಸಮಾಜ, ಸಾಲಿಗ್ರಾಮ ಜೈ ಭಾರತಿ ಜೈನ ಮಹಿಳಾ ಸಮಾಜದ ಶ್ರಾವಕಿಯರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ತುಮಕೂರಿನ ಪದ್ಮಾಂಬ ಮಹಿಳಾ ಸಮಾಜದವರು ರೂ. 1,00,000–00ಗಳನ್ನು ಬಾಹುಬಲಿ ಮಕ್ಕಳ ಆಸ್ಪತ್ರೆಯ ಗುಳ್ಳಕಾಯಜ್ಜಿ ಕ್ಷೀರ ನಿಧಿ ಯೋಜನೆಗೆ ದಾನವಾಗಿ ನೀಡಿದರು.

## ಯಾತ್ರಿನಿವಾಸ ಕಟ್ಟಡದ ಉದ್ಘಾಟನೆ



**ಮುದ್ದೆಬಿಹಾಳ** : ಪಟ್ಟಣದ ಹೊರವಲಯದ ಹಡಗಲಗೇರಿ ರಸ್ತೆಯಲ್ಲಿರುವ ಪದ್ಮಾವತಿ ಬಸದಿಯ ಆವರಣದ ಸಮುದಾಯ ಭವನದ ಮೇಲ್ಭಾಗದಲ್ಲಿ ನಿರ್ಮಿಸಿರುವ ನೂತನ ಯಾತ್ರಿನಿವಾಸ ಹಾಗೂ ಕಾರ್ಯಾಲಯವನ್ನು ಹೊಂಬುಜ ಜೈನ ಮಠದ ಪ.ಪೂ. ಜಗದ್ಗುರು ಡಾ. ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಆಶೀರ್ವಚನ ನೀಡಿ ಬೇರೆಯವರಿಗೆ ತೊಂದರೆ ಕೊಡುವುದು, ಅಸೂಯೆ ಪಡುವುದು, ಈರ್ಷೆ ಬೆಳೆಸುವುದು ಇವೆಲ್ಲ ಮನುಷ್ಯನ ಅವನತಿ ಮುನ್ಸೂಚನೆಗಳು. ಪೀಡಿಸಿದವರಿಗೂ ಒಳ್ಳೆಯದನ್ನೇ ಮಾಡಬೇಕೆನ್ನುವುದು ಮಾನವಧರ್ಮ. ಮೊದಲು ನಮ್ಮನ್ನು ನಾವು ಗೆಲ್ಲಬೇಕು. ಜೈನಧರ್ಮ ಈ ನಿಟ್ಟಿನಲ್ಲಿ ಮುನ್ನಡೆದು ಮಾನವ ಧರ್ಮವನ್ನು ಪಾಲಿಸುತ್ತಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಪದ್ಮರಾಜ ದಂಡಾವತಿ, ಕಮಿಟಿಯ ಅಧ್ಯಕ್ಷರಾದ ಅಭಿನಂದನ್ ಗೋಗಿ, ಉದ್ಯಮಿಗಳಾದ ಗಣಪತರಾವ್ ಹಜಾರೆ, ಬಾಹುಬಲಿ ಮುತ್ತಿನ, ಅಪ್ಪಾಸಾಹೇಬ ಮುತ್ತಿನ, ಬಾಹುಬಲಿ ಹೂಲಿ, ಬಾಬುಲಾಲ್ ಓಸ್ವಾಲ್, ಬಿ.ಆರ್. ಶಹಾ, ಗೊಮ್ಮಟೇಶ್ವರ ಸಗರಿ ಉಪಸ್ಥಿತರಿದ್ದರು.



## ಗುಳ್ಳಕಾಯಜ್ಜಿ ಕ್ಷೀರನಿಧಿಗೆ ದೇಣಿಗೆ

**ಶ್ರವಣಬೆಳಗೊಳ** : ಬಾಹುಬಲಿ ಮಕ್ಕಳ ಆಸ್ಪತ್ರೆಯ ಗುಳ್ಳಕಾಯಜ್ಜಿ ಕ್ಷೀರ ನಿಧಿ ಯೋಜನೆಗೆ ಮೈಸೂರಿನ ಪದ್ಮಶ್ರೀ ಮಹಿಳಾ ಸಮಾಜದ ವತಿಯಿಂದ ರೂ. **1,11,111–00** ಗಳನ್ನು ದಾನವಾಗಿ ನೀಡಿರುತ್ತಾರೆ.

## ಶ್ರೀ ವಿಂದ್ಯಗಿರಿ ಮತ್ತು ಶ್ರೀ ಚಂದ್ರಗಿರಿಯಲ್ಲಿ ಸ್ವಚ್ಛತಾ ಕಾರ್ಯ




**ಶ್ರವಣಬೆಳಗೊಳ, ಅ. 7** : ಸಾಂಗ್ಲಿಯ ಸನ್ಮತಿ ಸಂಸ್ಕಾರ ಮಂಚ್‌ನ 150 ಸದಸ್ಯರು ಶ್ರವಣಬೆಳಗೊಳದ ಶ್ರೀ ವಿಂದ್ಯಗಿರಿ ಮತ್ತು ಶ್ರೀ ಚಂದ್ರಗಿರಿಯಲ್ಲಿ ಎರಡು ದಿನಗಳ ಸ್ವಚ್ಛತಾ ಕಾರ್ಯವನ್ನು ಕೈಗೊಂಡಿದ್ದರು.

## ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ವಿದ್ಯಾರ್ಥಿಗಳ ಪ್ರವಾಸ

**ಶ್ರವಣಬೆಳಗೊಳ, ಅ.11** : ಪರಮಪೂಜ್ಯ ಶ್ರೀಗಳವರ ಆಶೀರ್ವಾದದೊಂದಿಗೆ ಶ್ರೀಕ್ಷೇತ್ರದ ಶ್ರೀ ಗೋಮ್ಮಟೇಶ್ವರ ವಿದ್ಯಾಪೀಠ ಬ್ರಹ್ಮಾಚರ್ಯಾಶ್ರಮ ಮತ್ತು



ಶ್ರೀ ಗೊಮ್ಮಟೇಶ್ವರ ಜೈನ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ದಸರಾ ರಜೆಯ ಪ್ರಯುಕ್ತ ಎರಡು ದಿನಗಳ ಮೈಸೂರು, ಕನಕಗಿರಿಗೆ ತೆರಳಿ ಕ್ಷೇತ್ರ ದರ್ಶನ ಮಾಡಿದರು. ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಪ್ರಾಂಶುಪಾಲರಾದ ರಾಜೇಶ್ ಜೈನ್ ಶಾಸ್ತ್ರಿಯವರು ಹಾಗೂ ವಾರ್ಡನ್ ಪದ್ಮಾ ಪ್ರವಾಸದ ನಿರ್ವಹಣೆ ಮಾಡಿದರು.



## ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ಮತ್ತು ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

**ಶ್ರವಣಬೆಳಗೊಳ** : ಶ್ರೀಕ್ಷೇತ್ರದಲ್ಲಿ 1979ರಲ್ಲಿ ಪರಮಪೂಜ್ಯ ಪ್ರಾತಃಸ್ಮರಣೀಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಂದ ಸ್ಥಾಪಿತ, ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಶ್ರೀಮದಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯುತ್ತಿರುವ ಶ್ರೀ ಗೋಮ್ಮಟೇಶ್ವರ ವಿದ್ಯಾಪೀಠ ಬ್ರಹ್ಮಾಚರ್ಯಾಶ್ರಮ ಮತ್ತು ಶ್ರೀ ಗೊಮ್ಮಟೇಶ್ವರ ಜೈನ ವಿದ್ಯಾರ್ಥಿ ನಿಲಯಗಳಲ್ಲಿ ಉತ್ತಮ ಹಾಗೂ ಉಚಿತ ವಸತಿ ಭೋಜನ ವ್ಯವಸ್ಥೆಗಳೊಂದಿಗೆ ಜೈನ ವಿದ್ಯಾರ್ಥಿಗಳಿಗೆ ವಿಶೇಷ ಧರ್ಮಪಾಠ, ಪೂಜಾಪಾಠ, ಪ್ರಾಕೃತ, ಹಿಂದಿ ಅಲ್ಲದೇ ಲೌಕಿಕ ಶಿಕ್ಷಣವನ್ನು ನೀಡಲಾಗುತ್ತಿದೆ.

ವಿದ್ಯಾಪೀಠ/ವಿದ್ಯಾರ್ಥಿ ನಿಲಯಗಳಿಗೆ 2024–25ನೇ ಸಾಲಿನ ಪ್ರವೇಶಾತಿಗಳು ಪ್ರಾರಂಭವಾಗಿದ್ದು ಪ್ರವೇಶ ಪಡೆಯಲಿಚ್ಛಿಸುವ 6ನೇ ತರಗತಿಯಿಂದ ಪದವಿ ಪೂರ್ವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ : ಮುಖ್ಯೋಪಾಧ್ಯಾಯರು (ಮೊ. 9945621216), ವ್ಯವಸ್ಥಾಪಕರು/ವಾರ್ಡನ್ (ಮೊ. 7619486352) ಸಂಪರ್ಕಿಸಬಹುದು.

## ದೀಕ್ಷಾರ್ಥಿಗೆ ಉಡಿತುಂಬುವ ಕಾರ್ಯಕ್ರಮ



**ಶ್ರವಣಬೆಳಗೊಳ, ಸೆ.28** : ಆ. 108 ಶ್ರೀ ವಿಶುದ್ಧಸಾಗರ ಮಹಾರಾಜರ ಸಂಘದ ದೀಕ್ಷಾರ್ಥಿ ಬಾ.ಬ್ರ. ವಿಪುಲ್ ಬಯ್ಯಾಜೀರವರಿಗೆ ಶ್ರೀಕ್ಷೇತ್ರದಲ್ಲಿ ಚಾತುರ್ಮಾಸ ನಿರತ ಪ.ಪೂ. ತ್ಯಾಗಿವೃಂದ ಹಾಗೂ ಪೂ. ಆರ್ಯಿಕಾ ಮಾತಾಜಿಯವರು ಹಾಗೂ ಪೂ. ಶ್ರೀಗಳವರ ಪಾವನ ಸಾನ್ನಿಧ್ಯದಲ್ಲಿ ಉಡಿ ತುಂಬುವ ಕಾರ್ಯಕ್ರಮವು ಸಂಪನ್ನಗೊಂಡಿತು. ಅಕ್ಟೋಬರ್ 25ರಂದು ಉತ್ತರಪ್ರದೇಶದ ಬಡೌತ್‌ನಲ್ಲಿ ದೀಕ್ಷಾಮಹೋತ್ಸವ ಜರುಗಲಿದ್ದು, ಚರ್ಯಾಶಿರೋಮಣಿ, ಆಧ್ಯಾತ್ಮಯೋಗಿ, ಆಚಾರ್ಯ ಶ್ರೀ 108 ವಿಶುದ್ಧ ಸಾಗರ ಮಹಾರಾಜರು ಒಟ್ಟು 8 ಜನರಿಗೆ ದೀಕ್ಷೆ ನೀಡಲಿದ್ದಾರೆ.

## ವಿಶೇಷ ದಿನಗಳು

**15.10.2023 ಭಾನುವಾರದಿಂದ** ನವರಾತ್ರಿ ಪ್ರಾರಂಭ

**18.10.2023 ಬುಧವಾರ :** ಸಂಕ್ರಮಣ

**20.10.2023 ಶುಕ್ರವಾರ :** ಸರಸ್ವತಿ ಪೂಜೆ,

**22.10.2023 ಭಾನುವಾರ :** ಜೀವದಯಾಷ್ಟಮಿ, ಭ. ಶೀಥಲನಾಥ ತೀರ್ಥಂಕರರ ಕೇವಲಜ್ಞಾನ ಕಲ್ಯಾಣ

**23.10.2023 ಸೋಮವಾರ :** ಆಯುಧಪೂಜೆ, ಮಹಾನವಮಿ

**24.10.2023 ಮಂಗಳವಾರ :** ವಿಜಯದಶಮಿ

**27.10.2023 ಶುಕ್ರವಾರ :** ಚತುರ್ದಶಿ

**28.10.2023 ಶನಿವಾರ :** ಹುಣ್ಣಿಮೆ

**29.10.2023 ಭಾನುವಾರ :** ಭ. ನೇಮಿನಾಥ ತೀರ್ಥಂಕರರ ಗರ್ಭಕಲ್ಯಾಣ

## ಜೈನ್ ಕ್ವಿಜ್

**: ಪ್ರಶ್ನೆಗಳು :**

1) ಜೀವನ ಗುಣ ಸ್ಥಾನಗಳು ಎಷ್ಟು?
2) ಪಂಚ ಸಮಿತಿಗಳು ಯಾವುವು ?
3) ಅನಾಗಾರಿ ಯಾರು?
4) ಉಪಾಧ್ಯಾಯ ಪರಮೇಷ್ಠಿಗಳ ಮೂಲಗುಣಗಳನ್ನು ನಾಲ್ಕು ಪದಗಳಲ್ಲಿ ತಿಳಿಸಿ.
5) ಈ ಆಚಾರ್ಯರಿಂದ ಶ್ರವಣಬೆಳಗೊಳ ಗುರುಪೀಠಕ್ಕೆ ಚಾರುಕೀರ್ತಿ ಉಪಾಧಿ ಬಂದಿತು.

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 25–10–2023ರ ಒಳಗೆ ದೂರವಾಣಿ ಸಂಖ್ಯೆ : **8660118443** ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸುವುದು.

ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹಿಂದಿನ ಸಂಚಿಕೆಯ ಉತ್ತರಗಳು :
1) ಜಿನಮಂದಿರಗಳು
2) ಅಹಂಕಾರವನ್ನು ಬಿಟ್ಟು ಮನಸ್ಸನ್ನು ಏಕಾಗ್ರಗೊಳಿಸುವುದು
3) ಮರ್ಕುಲಿ, ಕಂಬದಹಳ್ಳಿ, ಹೊಂಬುಜ
4) ಶ್ರಾವಕರ ರತ್ನತ್ರಯ ಧರ್ಮ ಧಾರಣೆಯ ಬಾಹ್ಯ ಸಂಕೇತ
5) ಎಂಟು

<u>ಮೊದಲು ಸರಿ ಉತ್ತರ ಬರೆದವರು</u> :
1) ಮಲಪ್ರಭಾ, ಬೆಳ್ಳೂರು
2) ಉಷಾ ಬಿ. ಕಲ್ಮನಿ, ಬೆಳಗಾವಿ
3) ಗೀತಾ ಆನಂದ್ ಎಂ.ಎನ್., ಮೈಸೂರು
4) ಎಂ.ಡಿ. ಮಂಜುಳಾ ಧರಣೇಂದ್ರ, ಮಾಯಸಂದ್ರ
5) ಸುಜಯ ಅಜಿತಕುಮಾರ್, ಹೊಸದುರ್ಗ

ಇವರುಗಳಿಗೆ ಶುಭಾಷಯಗಳು

## ವೇಣೂರಿನ ಭ. ಬಾಹುಬಲಿ ಮಹಾಮಸ್ತಕಾಭಿಷೇಕ ಮಹೋತ್ಸವಕ್ಕೆ ಪೂಜ್ಯ ತ್ಯಾಗಿಗಳು ಹಾಗೂ ಪೂಜ್ಯ ಶ್ರೀಗಳವರಿಗೆ ಭಕ್ತಿಪೂರ್ವಕ ಆಹ್ವಾನ




**ಶ್ರವಣಬೆಳಗೊಳ, ಅ.1 : ದಕ್ಷಿಣಕನ್ನಡ ಜಿಲ್ಲೆ ವೇಣೂರಿನಲ್ಲಿ 2024ರ ಫೆಬ್ರವರಿ 22 ರಿಂದ ಮಾರ್ಚ್ 1 ರವರೆಗೆ ಭ. ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಮಹೋತ್ಸವ ನಡೆಯಲಿದ್ದು, ಇದರ ಪೂಜಾ ಕಾರ್ಯಕ್ರಮಗಳ ವಿವರ ಪತ್ರವನ್ನು ಶ್ರವಣಬೆಳಗೊಳದಲ್ಲಿ ಚಾತುರ್ಮಾಸ ನಿರತ ತ್ಯಾಗಿಗಳು ಹಾಗೂ ಪೂಜ್ಯ ಭಟ್ಟಾರಕ ಸ್ವಾಮೀಜಿಯವರು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ಚಾತುರ್ಮಾಸ ನಿರತ ಪ.ಪೂ. ತ್ಯಾಗಿವೃಂದ, ಪೂ. ಆರ್ಯಿಕಾವೃಂದ ಮತ್ತು ಪೂ. ಭಟ್ಟಾರಕರನ್ನು ಭಕ್ತಿ ಪೂರ್ವಕವಾಗಿ ಆಮಂತ್ರಿಸಿದರು. ಈ ಸಂದರ್ಭದಲ್ಲಿ ಮಹಾಮಸ್ತಕಾಭಿಷೇಕ ಮಹೋತ್ಸವ ಕಮಿಟಿಯ ಕಾರ್ಯಾಧ್ಯಕ್ಷರಾದ ಡಾ. ಪದ್ಮಪ್ರಸಾದ್ ಅಜಿಲ ಅಳದಂಗಡಿ, ಕಾರ್ಯದರ್ಶಿ ಪ್ರವೀಣ್ ಇಂದ್ರ, ಉಪಾಧ್ಯಕ್ಷ ಪ್ರವೀಣ್ ಚಂದ್ರ ಜೈನ್ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.**

## ದಶಲಕ್ಷಣ ಪರ್ವದ ನಿಮಿತ್ತ ಜೈನ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮ



**ಶ್ರವಣಬೆಳಗೊಳ, ಸೆ.29** : ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ದಶಲಕ್ಷಣ ಪರ್ವದ ನಿಮಿತ್ತ ಪ್ರತಿ ದಿನ ಜೈನ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮವು ಜರುಗಿತು. ಪರ್ವದ ಕೊನೆಯ ದಿನ ನಡೆದ ಸ್ಪರ್ಧೆಯಲ್ಲಿ ಸುಮಾರು ಇಪ್ಪತ್ತೈದು ಸ್ಪರ್ಧಿಗಳು ಭಾಗವಹಿಸಿದ್ದು, ಜೈನ ಧರ್ಮ, ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ವಿಂದ್ಯಗಿರಿ, ಚಂದ್ರಗಿರಿ ಈ ನಾಲ್ಕು ವಿಷಯ ಕುರಿತಂತೆ ಕೇಳಲಾದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಟ್ಟ ವಸುಮತಿ ಜೈನ್ ಪ್ರಥಮ ಸ್ಥಾನ, ನಿರ್ಮಲಮ್ಮ ಶ್ರೇಯಾಂಸಕುಮಾರ್ ದ್ವಿತೀಯ ಸ್ಥಾನ ಹಾಗೂ ಹೇಮಾ ಸುನೀಲ್‌ಕುಮಾರ್ ತೃತೀಯ ಸ್ಥಾನ ಪಡೆದರು. ಅಂಬಿಕಾ ಶಾಲೆಯ ಶಿಕ್ಷಕ ವೃಂದದವರು ತೀರ್ಪುಗಾರರಾಗಿ ಪಾಲ್ಗೊಂಡಿದ್ದರು ಕಾರ್ಯಕ್ರಮವನ್ನು ರಾಜೇಶ್ ಶಾಸ್ತ್ರಿಗಳು ನಡೆಸಿಕೊಟ್ಟರು. ವಿಶೇಷ ಅತಿಥಿಗಳಾಗಿ ಎಸ್.ಡಿ.ಜೆ.ಎಮ್.ಐ ಮ್ಯಾನೇಜಿಂಗ್ ಕಮಿಟಿಯ ಕಾರ್ಯಾಧ್ಯಕ್ಷರಾದ ಹೆಚ್.ಪಿ. ಅಶೋಕ್ ಕುಮಾರ್ ಹಾಗೂ ಪ್ರಾಕೃತ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಜಯಕುಮಾರ್ ಉಪಾಧ್ಯೆ ಭಾಗವಹಿಸಿದ್ದರು.

## ಜಿನ ಪದಬಂಧ–03



<u>**ಮೇಲಿನಿಂದ ಕೆಳಕ್ಕೆ :**</u>

1) ಶರೀರಾದಿಗಳ ಸ್ವಭಾವವನ್ನು ಮತ್ತೆ ಮತ್ತೆ ಚಿಂತಿಸುವುದು.(4)
2) 16 ಸ್ವರ್ಗಗಳಲ್ಲಿ 16ನೇಯ ಸ್ವರ್ಗ (3)
3) ಅಷ್ಟಮಹಾಪ್ರಾತಿಹಾರ್ಯಗಳಲ್ಲಿ ಒಂದು (3)
4) ಪುಷ್ಪದಂತ ಮುನಿಗಳೊಡನೆ ಆಚಾರ್ಯ ಧರಸೇನರಲ್ಲಿ ಜ್ಞಾನ ಪಡೆದು ಷಟ್ಖಂಡಾಗಮ ರಚನೆ ಮಾಡಿದವರು. (4)
5) ಕ್ರೋಧ, ಮಾನ ಮಾಯ ಲೋಭಗಳೆಂಬ 4 ಬಗೆಯ ದೋಷಗಳಿಲ್ಲದಿರುವುದು.(4)
6) ಚಂದ್ರಪ್ರಭ ತೀರ್ಥಂಕರರ ಪ್ರಥಮ ಭವಾವಳಿ (3)
7) ಮೋಕ್ಷವನ್ನು ಪಡೆಯುವ 3 ಸಾಧನಗಳು (4)
8) 6 ಪರ್ವತಗಳಲ್ಲಿ ಒಂದಾದ ನೀಲ ಪರ್ವತದಲ್ಲಿರುವ ಸರೋವರ (3)
9) ಪ್ರಾಮಾಣಿಕತೆ, ಸರಳ ಸ್ವಭಾವವಾಗಿರುವ ಇದು ದಶಧರ್ಮಗಳಲ್ಲಿ ಒಂದು (3)
10) ವರ್ತಮಾನ ಕಾಲದ 8 ನೆಯ ತೀರ್ಥಂಕರರು (4)
11) ಭಗವಾನ್ ಮಹಾವೀರರಿಗಿರುವ ಮತ್ತೊಂದು ಹೆಸರು (3)
12) ಜಂಬೂ ದ್ವೀಪದ 7 ಕ್ಷೇತ್ರಗಳಲ್ಲಿ 4 ನೇಯದಾದ ಇದು ನಿಷಧ ಮತ್ತು ನೀಲ ಪರ್ವತಗಳ ನಡುವೆ ಇದೆ. (3)
13) ಅಭಿನಂದನ ತೀರ್ಥಂಕರರ ಯಕ್ಷ. (4)
15) ಶೃತಜ್ಞಾನ, ಅಥವಾ ತೀರ್ಥಂಕರರ ಮುಖವಾಣಿಯಿಂದ ಹೊರಟ ನಿರ್ದೋಷಯುತವೂ, ಶುದ್ಧವೂ ಆದ ವಾಣಿ. (3)
16) ದಶಧರ್ಮಗಳಲ್ಲಿ ಒಂದಾದ ಇದು 4 ಆರಾಧನೆಗಳಲ್ಲಿ ಒಂದಾಗಿದೆ. (2)

<u>**ಎಡದಿಂದ ಬಲಕ್ಕೆ :**</u>

1) ಬಹು ಪ್ರದೇಶವುಳ್ಳ ದ್ರವ್ಯಗಳಾದ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶಗಳನ್ನು ಹೀಗೆನ್ನುವರು. (4)
2) ಜೀವಿಗಳಲ್ಲಿಯ ಎಲ್ಲಾ ರೀತಿಯ ಭಯವನ್ನು ದೂರಮಾಡುವ 4 ಪ್ರಕಾರದ ದಾನಗಳಲ್ಲಿ ಒಂದು. (3)
5) ಅಹಿಂಸಾ ಧರ್ಮದಲ್ಲಿ ಸಂಶಯ ಪಡದಿರುವುದು, ಅಥವಾ ಸಮ್ಯಗ್ದರ್ಶನದ 8 ಅಂಗಗಳಲ್ಲಿ ಮೊದಲನೆಯದು.(4)
6) ಭೂತಕಾಲದ 24 ತೀರ್ಥಂಕರರಲ್ಲಿ 5 ನೇಯ ತೀರ್ಥಂಕರರು.(3)
7) ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರ ತಂದೆಯ ಹೆಸರು. (4)
8) ಕೇವಲ ಜ್ಞಾನ ಪಡೆದವರನ್ನು ಹೀಗೆನ್ನುವರು. (3)
9) ಸ್ವಾಧ್ಯಾಯದ 5 ಬೇಧಗಳಲ್ಲಿ ಒಂದು (3)
10) ವರ್ತಮಾನ ಕಾಲದ ವಾಸುಪೂಜ್ಯ ತೀರ್ಥಂಕರರ ಜನ್ಮಸ್ಥಳ. (4)
12) ವರ್ತಮಾನ ಕಾಲದ ಅರನಾಥ ತೀರ್ಥಂಕರರ ಯಕ್ಷಿ ( 3)
13) ಚಕ್ರವರ್ತಿ ಭರತ ಹಾಗು ಬ್ರಾಹ್ಮಿಯ ತಾಯಿ (4)
14) ಭೂತಕಾಲದ 24 ತೀರ್ಥಂಕರರುಗಳಲ್ಲಿ 14 ನೇಯ ತೀರ್ಥಂಕರರು (3)
15) ಹಿಂಸೆಗೆ ಕಾರಣವಾದ ಕೆಲಸ, ಅಥವಾ ಒಕ್ಕಲುತನ (3)
17) ಭ. ವೃಷಭನಾಥ ತೀರ್ಥಂಕರರ ಮಾತೆ (ತಿರುಗಿದೆ) (4)
18) ಸಪ್ತತತ್ವಗಳಲ್ಲಿ ಒಂದಾದ ಇದು ಪೂರ್ವ ಬದ್ಧ ಕರ್ಮವನ್ನು ಹೊರಹಾಕುವುದಾಗಿದೆ. (3)
19) ಭಗವಂತನ ಆರಾಧನೆಯಲ್ಲಿ ಅಜ್ಞಾನಾಂಧಕಾರವನ್ನು ಹೋಗಲಾಡಿಸಲು ಅರ್ಪಿಸುವ ದ್ರವ್ಯ (2)


ರಚನೆ : **ಎ.ಸಿ.ಇಂದಿರಾ ಜಯಕುಮಾರ್, ಶ್ರವಣಬೆಳಗೊಳ**

**ಜಿನ ಪದಬಂಧ–02ರ ಉತ್ತರಗಳು**

<u>ಮೇಲಿನಿಂದ ಕೆಳಕ್ಕೆ :</u>
1) ಅನುಪ್ರೇಕ್ಷೆ 2) ಅಚ್ಯುತ 3) ಚಾಮರ 4) ಭೂತಬಲಿ 5) ನಿಷ್ಕಷಾಯ 6) ಶ್ರೀವರ್ಮ 7) ರತ್ನತ್ರಯ 8) ಕೇಸರಿ 9) ಆರ್ಜವ 10) ಚಂದ್ರಪ್ರಭ 11) ಸನ್ಮತಿ 12) ವಿದೇಹ 13) ಯಕ್ಷೇಶ್ವರ 15) ಆಗಮ 16) ತಪ

<u>ಎಡದಿಂದ ಬಲಕ್ಕೆ :</u>
1) ಅಸ್ತಿಕಾಯ 2) ಅಭಯ 5) ನಿಶ್ಯಂಕಿತ 6) ಶ್ರೀಧರ 7) ರತ್ನವರ್ಮ 8) ಕೇವಲಿ 9) ಆಮ್ನಾಯ 10) ಚಂಪಾಪುರಿ 12) ವಿಜಯ 13) ಯಶಸ್ವತಿ 14) ಉತ್ಸಾಹ 15) ಆರಂಭ 17) ಮರುದೇವಿ 18) ನಿರ್ಜರ 19) ದೀಪ

## ಜಾರುಗುಪ್ಪೆ ಪಾರ್ಶ್ವನಾಥಸ್ವಾಮಿ ದೇವಸ್ಥಾನದ 125ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವ



**ಶ್ರವಣಬೆಳಗೊಳ** : ಜಾರುಗುಪ್ಪೆ ಭ. 1008 ಶ್ರೀ ಪಾರ್ಶ್ವನಾಥಸ್ವಾಮಿ ದೇವಸ್ಥಾನ ಸೇವಾ ಸಮಿತಿ, ಶ್ರೀ ಜಿ.ಕೆ. ಪದ್ಮರಾಜಯ್ಯ ಮತ್ತು ಶ್ರೀ ಜಿ.ಕೆ. ಧರಣೇಂದ್ರಯ್ಯ ಟ್ರಸ್ಟ್, ಶ್ರವಣಬೆಳಗೊಳ ಇವರ ವತಿಯಿಂದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಮುಂದಿನ ತಿಂಗಳು ನವೆಂಬರ್ 4 ಮತ್ತು 5ರಂದು ಜಾರುಗುಪ್ಪೆ ಪಾರ್ಶ್ವನಾಥ ಸ್ವಾಮಿಯ ದೇವಸ್ಥಾನದ 125ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವವು ಜರುಗಲಿದೆ.

## ದಾನಿಗಳಿಗೆ ಅಭಿನಂದನೆ

ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಹಾಗೂ ದಾನಿಗಳ ಸಹಯೋಗದೊಂದಿಗೆ ಶ್ರೀಧವಲತೀರ್ಥಂನಲ್ಲಿ ಕಾರ್ಯನಿರ್ವಹಿಸುತ್ತಿರುವ **ಬಾಹುಬಲಿ ಮಕ್ಕಳ ಆಸ್ಪತ್ರೆ** ಹಾಗೂ **ಬಾಹುಬಲಿ ಜನರಲ್ ಆಸ್ಪತ್ರೆ**ಯಲ್ಲಿ ಪ್ರತಿನಿತ್ಯ ನೂರಾರು ಹೊರ ರೋಗಿಗಳಿಗೆ ಉಚಿತ ಔಷಧೋಪಚಾರ ನೀಡಲಾಗುತ್ತಿದೆ.

**ಔಷಧ ದಾನಿಗಳು :** ಹಾಸನದ ಜಿಲ್ಲಾ ಔಷಧಿ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರಿನ ರಾಘವೇಂದ್ರ ಸಿ.ಕೆ, ಚೆನ್ನೈನ ಮೆಡ್‌ವಿನ್ಸ್ ಲ್ಯಾಬ್, ಬೆಂಗಳೂರಿನ ಮೂಲಚಂದ್ ನಹಾರ್, ಮೈಕ್ರೋ ಲ್ಯಾಬ್, ಗುಬ್ಬಿಯ ಎನ್.ಸಿ ಧರಣೇಂದ್ರ, ಬೆಂಗಳೂರಿನ ಡಾ. ಬ್ರಹ್ಮರಾಜ್, ಮಂಡ್ಯ ಸ್ವಸ್ತಿಕ್ ಫಾರ್ಮಾದ ಪ್ರಮೋದ್ ಕುಮಾರ್, ಮದ್ದೂರಿನ ರಾಜು ಈ, ಇಚಲ್‌ಕರಂಜಿಯ ಸನ್‌ರೈಸ್ ಫಾರ್ಮ, ಬೆಂಗಳೂರಿನ ಅಖಿಲೇಶ್ ಜೈನ್, ಜಯಸಿಂಗ್‌ಪುರದ ಮೆಡಿಸ್ವಾ ಫಾರ್ಮಾಸೂಟಿಕಲ್ಸ್‌ನವರು ಉಚಿತ ವಿತರಣೆಗಾಗಿ ಔಷದಿಗಳನ್ನು ಒದಗಿಸುವ ಮೂಲಕ ಆಸ್ಪತ್ರೆಯ ಈ ಸೇವಾಕಾರ್ಯಗಳಿಗೆ ಸಹಕರಿಸಿರುತ್ತಾರೆ.

**ದಾನ ಸಹಯೋಗ:** ರಾಜಸ್ಥಾನದ ಎಂ.ಆರ್.ಮಿಂಡಾ ಚಾರಿಟೇಬಲ್ ಟ್ರಸ್ಟ್, ಮುಂಬಯಿಯ ಮೆ. ಆರತಿ ಇಂಡಸ್ಟ್ರೀಸ್‌ನ ಪಿ.ಎ. ಸೇಠಿ, ಹರಿದ್ವಾರದ ಆಟೋಮ್ಯಾಟ್ ಇರಿಗೇಷನ್ ಪ್ರೈ. ಲಿಮಿಟೆಡ್, ಹರಿಯಾಣದ ಅಭಯ್, ಸೂರಜ್, ಏಕಾಗ್ರತ್ ಜೈನ್, ಕೊಲ್ಹಾಪುರದ ಭರತೇಶ್ ಶ್ರೀಕಾಂತ್ ಬಾಗಿ ಇವರುಗಳು ಐವತ್ತು ಸಾವಿರಕ್ಕಿಂತಲೂ ಹೆಚ್ಚಿನ ದಾನ ಸಹಯೋಗ ನೀಡುವ ಮೂಲಕ ಆಸ್ಪತ್ರೆಯ ಅಭಿವೃದ್ಧಿ, ನಿರ್ವಹಣೆಗೆ ಸಹಕರಿಸಿರುತ್ತಾರೆ.

**ವೈದ್ಯವೃಂದವರ ಸೇವೆ :** ಮಕ್ಕಳ ತಜ್ಞರಾಗಿರುವ ಡಾ. ಸಿ.ಕೆ. ವಿಜಯಕುಮಾರ್, ಜನರಲ್ ಮೆಡಿಸಿನ್ ವಿಭಾಗದಲ್ಲಿ ಡಾ. ಪೂರ್ಣಿಮಾ ಕೆ.ಆರ್, ಡಾ. ರಾಮಚಂದ್ರ ಬಿ.ಹೆಚ್, ದಂತ ವಿಭಾಗದಲ್ಲಿ ಡಾ. ಕಾವ್ಯಶ್ರೀ ಡಿ. ಪ್ರತಿನಿತ್ಯ ರೋಗಿಗಳ ಸೇವಾ ಕಾರ್ಯದಲ್ಲಿ ತೊಡಗಿದ್ದು, ಡಾ. ಅಶ್ವಿನಿ ಅಶೋಕ್ ಇವರು ತಿಂಗಳ ಮೊದಲ ಭಾನುವಾರ ಬೆಂಗಳೂರಿನಿಂದ ಬಂದು ಉಚಿತವಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಜೊತೆಗೆ ಆಸ್ಪತ್ರೆಯಲ್ಲಿ ನೇತ್ರ ವಿಭಾಗ, ಲ್ಯಾಬ್, ಡಿಜಿಟಲ್, ಎಕ್ಸ್‌ರೇ, ಇಸಿಜಿ, ಮಕ್ಕಳಿಗೆ ಉಚಿತ ಹಾಲು ವಿತರಣೆ ಸೇವೆಗಳು ಲಭ್ಯವಿದೆ.

ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ದಾನಿಗಳಿಗೆ ಶುಭಾಶೀರ್ವಾದ ನೀಡಿರುತ್ತಾರೆ.

## ಪ್ರಾಕೃತ ಕಲಿಯಿರಿ

ತ ಥ ದ ಧ ನ ಗಿಂತ ಮೊದಲು ಬರುವ ಅನುಸ್ವಾರದ ಉಚ್ಚಾರಣೆ 'ನ್' ತರಹ ಆಗುತ್ತದೆ.
ಉದಾ : ಅಂತ–ಅನ್ತ

ಪ ಫ ಬ ಬ ಮ ದ ಮೊದಲು ಬರುವ ಅನುಸ್ವಾರದ ಉಚ್ಚಾರಣೆಯು 'ಮ' ಸಮಾನ ಆಗುತ್ತದೆ. ಸಂಮಾಣ–ಸಮ್ಮಾನ ಇತ್ಯಾದಿ.

**ಅನುನಾಸಿಕ :** ಅನುಸ್ವಾರದ ಕೋಮಲ ರೂಪವನ್ನು ಅನುನಾಸಿಕ ಎಂದು ಕರೆಯಲಾಗುತ್ತದೆ. ಅನುನಾಸಿಕ ಸ್ವರವು (ᐡ) ಚಿಹ್ನೆಯನ್ನು ಹೊಂದಿದೆ. ದೇವೆಹಿಂ, ಸಾಹುಹಿಂ, ಕಮಲಾಇಂ ವಾರೀಇಂ, ವಾರಿಹಿಂ, ತೇಹಿಂ ಇತ್ಯಾದಿ.

**ಅರ್ಧಚಂದ್ರ :** ಹಿಂದಿ ಮತ್ತು ಇಂಗ್ಲೀಷ್‌ನಂತೆಯೇ ಪ್ರಾಕೃತದಲ್ಲಿಯೂ ಕೆಲವು ಸ್ವರಗಳ ಮೇಲೆ 'ᐡ' ಇಂತಹ ಚಿಹ್ನೆ ಸ್ವರಗಳಿಗೆ ಹ್ರಸ್ವವನ್ನು ತೋರಿಸಲು ಅನ್ವಯಿಸಲಾಗುತ್ತದೆ. ರಣೆᐡ ತಾಣಂತರೇᐡ ಖಗ್ಗಯೇᐡ, ಪಆಹಿರಾಯೇᐡ ಇತ್ಯಾದಿ.

**ಗುಣಿದಕ್ಖರಾಣಿ (ಗುಣಿತಾಕ್ಷರಗಳು)**

ವ್ಯಂಜನಾಕ್ಷರದ ಜೊತೆ ಸ್ವರಾಕ್ಷರ ಸೇರಿ ಪೂರ್ಣಾಕ್ಷರವಾಗುವುದಕ್ಕೆ ಗುಣಿತಾಕ್ಷರ ಅಥವಾ ಕಾಗುಣಿತ ಎನ್ನುತ್ತಾರೆ.

| | |
|---|---|
| ಕ್ + ಅ = ಕ | ಕ್ + ಊ = ಕೂ |
| ಕ್ + ಆ = ಕಾ | ಕ್ + ಏ = ಕೇ |
| ಕ್ + ಇ = ಕಿ | ಕ್ + ಓ = ಕೋ |
| ಕ್ + ಈ = ಕೀ | ಕ್ + ಅಂ = ಕಂ |
| ಕ್ + ಉ = ಕು | |

## ಬೆಳಗೊಳದ ಪುಣ್ಯಪುಂಜೈಕಧಾಮ ಭಂಡಾರಿ ಹುಳ್ಳಮಯ್ಯ

ದಂಡನಾಯಕರು, ಭಂಡಾರಿಗಳು, ಕೇವಲ ರಾಜ್ಯ ರಕ್ಷಣೆಯಲ್ಲಿ, ಯುದ್ಧಗಳಲ್ಲಿ ಪ್ರಮುಖ ಪಾತ್ರವಹಿಸದೆ ತಾವು ನಂಬಿದ ಧರ್ಮದ ಏಳಿಗೆಗಾಗಿ, ಧರ್ಮದ ಗುರುಗಳ ಸೇವೆಗಾಗಿ, ಧರ್ಮ ಕ್ಷೇತ್ರಗಳ ಅಭಿವೃದ್ಧಿಗಾಗಿ ನಿರಂತರವಾದ ಸೇವೆ ಸಲ್ಲಿಸಿ, ಶಿಕ್ಷಣ ಮತ್ತು ನಗರಗಳ ಅಭಿವೃದ್ಧಿಗಾಗಿ ಮಾಡಿದ ಶಾಶ್ವತವಾದ ಕಾರ್ಯಗಳು ಅವರ ಹೆಸರನ್ನು ಚಿರಸ್ಮರಣೀಯವನ್ನಾಗಿಸಿದೆ. ಅವರಲ್ಲಿ ನಮಗೆ ಕಾಣಸಿಗುವ ಹೊಯ್ಸಳರ ದಂಡನಾಯಕರಾದ ಗಂಗರಾಜ, ಪುಣಿಸಮಯ್ಯ, ಭಂಡಾರಿ ಹುಳ್ಳರಾಜ, ಮರಿಯಾನೆ ದಂಡನಾಯಕರ ಕಾರ್ಯ ಕನ್ನಡ ನಾಡಿಗೆ ಹೆಮ್ಮೆ ಪಡುವಂತಹದ್ದು.

12ನೇ ಶತಮಾನದಲ್ಲಿ ದಂಡನಾಯಕ ಗಂಗರಾಜನ ನಂತರ ಶ್ರವಣಬೆಳಗೊಳವನ್ನು ಒಂದು ಜೈನ ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸುವಲ್ಲಿ ಭಂಡಾರಿ ಹುಳ್ಳರಾಜನ ಪಾತ್ರ ಹಿರಿದಾಗಿದೆ. ಹುಳ್ಳರಾಜನು ತನ್ನ ತನು, ಮನ, ಧನವನ್ನು ತನಗಾಗಿ ಬಳಸಿಕೊಳ್ಳದೆ ತಾನು ನಂಬಿದ ಧರ್ಮದ ಉದ್ಧಾರಕ್ಕಾಗಿ, ತನ್ನ ಗುರುಗಳ ಸೇವೆಗಾಗಿ, ಜನರ ಶಿಕ್ಷಣಕ್ಕಾಗಿ, ಧರ್ಮ ಕ್ಷೇತ್ರಗಳ ಸಂವರ್ಧನೆಗಾಗಿ ಧಾರೆ ಎರೆದು ತನ್ನ ಬದುಕನ್ನು ಸಾರ್ಥಕ ಮಾಡಿಕೊಂಡ ನಿದರ್ಶನಗಳು ನಮಗೆ ಇಂದಿಗೂ ನಾಡಿನ ಮೂಲೆ ಮೂಲೆಗಳಲ್ಲಿ ಕಾಣಸಿಗುತ್ತವೆ. ಅದಕ್ಕಾಗಿಯೇ ಹುಳ್ಳರಾಜನು ಪುಣ್ಯಪುಂಜೈಕಧಾಮ ಎಂದೆನಿಸಿದ್ದಾನೆ.

ಭಂಡಾರಿ ಹುಳ್ಳರಾಜನು ಚಾಲುಕ್ಯರ ಕಾಲಾನಂತರ ಅತ್ತಿಮಬ್ಬೆಯ ಪತಿ ನಾಗದೇವನ ಐದನೇ ತಲೆಮಾರಿನ ವಾಜಿವಂಶದಲ್ಲಿ ಕ್ರಿ.ಶ.1118ರ ಆಸುಪಾಸಿನಲ್ಲಿ ಜನ್ಮತಾಳಿದ ಪುಣ್ಯಪುರುಷ. ಹುಳ್ಳರಾಜನ ತಂದೆ ಚಾಲುಕ್ಯರ ಕಾಲದಲ್ಲಿ ಒಂದು ಸಣ್ಣ ಸ್ವತಂತ್ರ ಪ್ರಾಂತ್ಯದ ನಾಯಕನಾಗಿದ್ದು ಚಾಲುಕ್ಯರು ಶೈವ ಧರ್ಮಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿ ಜೈನ ಧರ್ಮವನ್ನು ಕಡೆಗಣಿಸತೊಡಗಿದ ನಂತರ ಹೊಯ್ಸಳರ ಸಾಮ್ರಾಜ್ಯದಲ್ಲಿ ತನ್ನ ಪ್ರಾಂತ್ಯವನ್ನು ವಿಲೀನಗೊಳಿಸಿದ. ವಾಜಿವಂಶದ ಕುಲತಿಲಕನೆನೆಸಿದ ಶ್ರೀ ಯಕ್ಷರಾಜ ಮತ್ತು ಲೋಕವಂದಿತೆಯಾದ ಲೋಕಾಂಬಿಕೆಯ ಪುತ್ರನಾದ ಹುಳ್ಳನು ತನ್ನ ತಂದೆ ತಾಯಿಯಂತೆ ವೀರನು, ಧರ್ಮನಿಷ್ಠನು, ಕ್ಷಾತ್ರೀಯ ತೇಜಸ್ಸನ್ನು ಹೊಂದಿದವನು ಪರಮ ಶ್ರಾವಕನಾಗಿ ಬೆಳದು ಹೊಯ್ಸಳರ ಕೀರ್ತಿಶಾಲಿ ಭಂಡಾರಿಯಾಗಿ, ದಂಡನಾಯಕನಾಗಿ ಹೆಸರಾದವನು.

ಹುಳ್ಳರಾಜನು ಒಂದು ಶತಮಾನದ ಕಾಲ ಬದುಕಿದ ದೀರ್ಘಾಯುಷಿ. ಹೊಯ್ಸಳ ಅರಸ ವಿಷ್ಣುವರ್ಧನ, ನಾರಸಿಂಹ, ಇಮ್ಮಡಿ ಬಲ್ಲಾಳ ಈ ಮೂರು ಅರಸರ ಆಡಳಿತವನ್ನು ಕಂಡವನು. ಅವರುಗಳ ಕಾಲದಲ್ಲಿ ಭಂಡಾರಿಯಾಗಿ, ಮಹಾ ಪ್ರಧಾನಿಯಾಗಿ, ದಂಡನಾಯಕನಾಗಿ ಸೇವೆಗೈದ ಧೀರೋದ್ಧಾತ. ವಿಷ್ಣುವರ್ಧನನಿಗೆ ಪಾದಪದ್ಮೋಪಜೀವಿಯಾಗಿದ್ದ ಹುಳ್ಳರಾಜನು, ದೇವೇಂದ್ರನಿಗೆ ಬೃಹಸ್ಪತಿ ಇದ್ದಂತೆ, ನಾರಸಿಂಹನಿಗೆ ಉಚಿತ ಕಾರ್ಯ ವಿಧಾನಧರನಾಗಿ, ಮಂತ್ರಿಯಾಗಿ ರಾರಾಜಿಸಿದನು. ಹುಳ್ಳರಾಜನು ತನ್ನ ದೀರ್ಘಾಯುಷ್ಯದ ಕಾಲದಲ್ಲಿ ಕುಕ್ಕಟಾಸನ ಮಾಲಧಾರಿ ದೇವ, ಭಾನುಕೀರ್ತಿ ಸಿದ್ಧಾಂತ ದೇವ, ದೇವಕೀರ್ತಿ ಹಾಗೂ ನಯಕೀರ್ತಿ ಸಿದ್ಧಾಂತ ಚಕ್ರವರ್ತಿಗಳು ಈ ನಾಲ್ಕು ಜನ ಜೈನಧರ್ಮ ಗುರುಗಳ ಸೇವೆ ಮಾಡಿ ಅವರ ಮಾರ್ಗದರ್ಶನದಂತೆ ನಡೆದು ಧರ್ಮಪರಿಪಾಲನೆ ಮಾಡಿದವ. ದೇವಾನು ದೇವತೆಗಳಿಂದ ಪೂಜಿಸಿಕೊಳ್ಳುವ ಅರ್ಹಂತನು ಹುಳ್ಳರಾಜನ ನಂಬಿದ ಭಗವಂತನಾಗಿದ್ದು, ಅರ್ಹಂತರ ಪಾದಸೇವೆಗಾಗಿ ಸರ್ವವನ್ನು ಧಾರೆ ಎರೆದ ಮಹಾ ಪುಣ್ಯಜೀವಿ ಹುಳ್ಳರಾಜ.

ಇವನ ಸಾಹಸ ಹಾಗೂ ಧರ್ಮ ಪ್ರಭಾವನೆ ಬಗ್ಗೆ ಶಾಸನಗಳಲ್ಲಿ, 'ಹುಳ್ಳರಾಜನು ತೂಕದಲ್ಲಿ ಭೂಮಿಯನ್ನು ಮೀರಿಸುವ, ಆಳದಲ್ಲಿ ಸಾಗರವನ್ನು ಮಿಕ್ಕಿಸುವ, ಔನ್ನತ್ಯದಲ್ಲಿ ಮಂದರವನ್ನು ನಾಚಿಸುವ, ಔದಾರ್ಯದಲ್ಲಿ ಕಲ್ಪತರುವನ್ನು ಹಿಂದಿಕ್ಕುವ, ಜಿನೇಂದ್ರನ ಪಾದಗಳ ಪೂಜೆಯಲ್ಲಿ ಮುಳುಗಿ ಹೋಗುವ ಹುಳ್ಳನ ಓಜಸ್ಸು ಮತ್ತು ತೇಜಸ್ಸಿಗೆ ಈ ಮರ್ತ್ಯದಲ್ಲಿ ಸಮನಿಲ' ಎಂದು ಉಲ್ಲೇಖಿಸಿವೆ. ತನ್ನ ಜೀವನದ ಬಹು ಸಮಯವನ್ನು ಹುಳ್ಳರಾಜನು ಜಿನಾಲಯಗಳ ಜೀರ್ಣೋದ್ಧಾರ ಮಾಡುವುದು, ಜಿನಪೂಜೆಯಲ್ಲಿ ತನ್ಮಯನಾಗುವುದು, ಜಿನಮುನಿಗಳ ಸೇವೆ ಮಾಡುವುದು, ದಾನದತ್ತಿ ನೀಡುವುದು, ಜಿನಪದ ಸ್ತೋತ್ರದ ಕ್ರಿಯೆಯಲ್ಲಿ ನಿಷ್ಠೆಯಿಡುವುದು, ಜಿನರ ಪುಣ್ಯ ಪುರಾಣ ಶ್ರವಣ ಮಾಡುವುದು ಇವುಗಳಲ್ಲೇ ಸಂತಸಪಡುತ್ತ ನಿತ್ಯವೂ ಹೊತ್ತು ಕಳೆದವನು.

ದಂಡನಾಯಕ ಗಂಗರಾಜನ ನಂತರ ಹೊಯ್ಸಳ ಸಾಮ್ರಾಜ್ಯದಲ್ಲಿ ಜಿನಧರ್ಮದ ಅಭ್ಯುದಯಕ್ಕೆ ಶ್ರಮಿಸಿದ ಮಹೋನ್ನತಿ ಎನಿಸಿದವನು ಹುಳ್ಳರಾಜ.

ಸ್ಥಿರಚಿತ್ತನಾಗಿ, ಧರ್ಮ ಚಿಂತನೆಯ ಮಹೋಧರನಾಗಿದ್ದ ಹುಳ್ಳರಾಜನು ಬಂಕಾಪುರದಲ್ಲಿ ಶಿಥಿಲವಾಗಿದ್ದ 'ಉಪ್ಪಟಾಯ್ತನ' ಜಿನಾಲಯವನ್ನು ಜೀರ್ಣೋದ್ಧಾರ ಮಾಡಿದ. ಅಲ್ಲಿಯೇ ಕಲಿವಿಟನೆಂದು ಪ್ರಸಿದ್ಧನಾಗಿದ್ದ ಶೂರವಿಟನು ಮಾಡಿಸಿದ ಜಿನಾಲಯವು ಜೀರ್ಣಾವಸ್ಥೆಯಲ್ಲಿದ್ದದ್ದನ್ನು ಕಂಡು, ಧೃಡ ಮನದಿಂದ ದಾನ ನೀಡಿ ಕೈಲಾಸದಂತೆ ಉನ್ನತವಾದ ಬಸದಿಯನ್ನು ಕಟ್ಟಿಸಿದನು. ಜೈನ ಮಹಾತೀರ್ಥವಾದ ಕೊಪಣಾಚಲದಲ್ಲಿ ಇಪ್ಪತ್ತುನಾಲ್ಕು ಜಿನಮುನಿಗಳ ಸಂಘಕ್ಕೆ, ಅವರ ನಿರಂತರವಾದ ಸೇವೆಗಾಗಿ ಬಹಳಷ್ಟು ಬಂಗಾರವನ್ನು ಪುದವಟ್ಟು ಮಾಡಿ ಅಕ್ಷಯದಾನ ಸಲ್ಲುವಂತೆ ಮಾಡಿದನು. ಇವನ ಈ ಸತ್ಪಾತ್ರ ದಾನವನ್ನು ಲೋಕವೆಲ್ಲಾ ಕೊಂಡಾಡಿತು. ಕೆಲ್ಲಂಗೆರೆಯಲ್ಲಿ ಗಂಗರು ಮಾಡಿಸಿದ್ದ, ನಾಮಾವಶೇಷವಾಗಿದ್ದ ಬಸದಿಯನ್ನು ಕಂಡ ಹುಳ್ಳರಾಜನು ಅಧಿಷ್ಠಾನದಿಂದ ಕಳಸದವರೆಗೆ ಪುನರ್ನಿಮಿಸಿ ಹೊಸದಾಗಿ ಮಾಡಿಸಿದನು. ಅಲ್ಲದೇ ಪಂಚ ಬಸದಿಗಳನ್ನು ಮಾಡಿಸಿ ಪಂಚಕಲ್ಯಾಣ ಮಾಡಿಸಿದನು. ಕೆಲ್ಲಂಗೆರೆಯ ಪ್ರತಾಪಪುರವನ್ನು ಜೀರ್ಣೋದ್ಧಾರ ಮಾಡಿ ಧರ್ಮಪ್ರಭಾವಕನೆನಿಸಿದನು.

ಗಂಗರಾಜನ ನಂತರ ಶ್ರವಣಬೆಳಗೊಳವನ್ನು ಸಂಪೂರ್ಣ ನಗರೀಕರಣ ಮಾಡಿ, ಗಂಗರಾಜನ ಕಾಲದಲ್ಲಿ ನಿರ್ಮಾಣವಾಗಿ ಜೀರ್ಣಾವಸ್ಥೆಯಲ್ಲಿದ್ದ ಬಸದಿಗಳನ್ನು ಜೀರ್ಣೋದ್ಧಾರ ಮಾಡಿ ಬೆಳಗೊಳದ ಕೀರ್ತಿಯನ್ನು ಹೆಚ್ಚಿಸಿದನು.

ಕ್ರಿ.ಶ.1159ರಲ್ಲಿ ಪವಿತ್ರವಾದ ಬೆಳ್ಗೊಳ ನಗರದಲ್ಲಿ ಚತುರ್ವಿಂಶತಿ ತೀರ್ಥಂಕರರ ಬಸದಿಯನ್ನು, ನೃತ್ಯ ಮಂಟಪದಲ್ಲಿ ಎರಡು ಸ್ಥಿರವಾದ ಜಿನಾಲಯವನ್ನು, ಲಾವಣ್ಯಮಯವಾದ ಕಲಾಯುಕ್ತವಾದ ಚಿತ್ತಾರದಿಂದ ಕೂಡಿದ ಮಹಾದ್ವಾರ ಮತ್ತು ಮಹಾಭವನ, ಪ್ರಾಕಾರಗಳಿಂದ ಪರಿಪೂರ್ಣವಾದ ಭವ್ಯ ಜಿನಾಲಯವನ್ನು ಕಟ್ಟಿಸಿದನು. ಈ ಬಸದಿ ಬೆಳ್ಗೊಳದಲ್ಲಿ ರಾರಾಜಿಸಿ, ಹುಳ್ಳರಾಜನ ಕೀರ್ತಿಯನ್ನೆಚ್ಚಿಸಿತು. ಇದನ್ನು ನೋಡಲೆಂದೇ ಬಂದ ಹೊಯ್ಸಳ ಅರಸ ನಾರಸಿಂಹನು ಬಸದಿಯ ಸೊಬಗಿಗೆ, ವಿನ್ಯಾಸಕ್ಕೆ ಮನಸೋತು ಈ ಜಿನಾಲಯವನ್ನು 'ಭವ್ಯಚೂಡಾಮಣಿ' ಎಂದು ಉದ್ಘೋಷಿಸಿ ಹುಳ್ಳರಾಜನ ಕಾರ್ಯವನ್ನು ಮೆಚ್ಚಿ ಹುಳ್ಳರಾಜನಿಗೆ 'ಸಂಯುಕ್ತ ಚೂಡಾಮಣಿ' ಎಂಬ ಬಿರುದನ್ನಿತ್ತು, ಬಸದಿಗಾಗಿ 'ಸವಣೇರು' (ಶ್ರವಣೇರಿ)ಗ್ರಾಮವನ್ನು ದಾನ ನೀಡಿ, ಈ ಬಸದಿಗೆ ನಯಕೀರ್ತಿ ಸಿದ್ಧಾಂತ ಚಕ್ರವರ್ತಿಗಳನ್ನು ಮಹಾ ಮಂಡಲಾಚಾರ್ಯರನ್ನಾಗಿ ನೇಮಿಸಿದನು. ಈ ಬಸದಿಯು 'ಗೊಮ್ಮಟಪುರದ ಭೂಷಣ' ವೆಂದಿನಿಸಿತು. ಮುಂದೆ ಅದು ಭಂಡಾರ ಬಸದಿ ಎಂದಾಯಿತು. ಇಂದಿಗೂ ಈ ಭಂಡಾರ ಬಸದಿಯು ಬೆಳಗೊಳದ ಅಕರ್ಷಣೆಯ ಕೇಂದ್ರವಾಗಿದೆ.

ಇವೇ ಅಲ್ಲದೇ ಹುಳ್ಳನು ತನ್ನ ಗುರು ದೇವಕೀರ್ತಿಗಳ ನಿಷದಿಯನ್ನು ಚಿಕ್ಕಬೆಟ್ಟದಲ್ಲಿ ನಿಲ್ಲಿಸಿ, ಅದರ ಗೌರವಾರ್ಥ ಜಿನನಾಥಪುರದಲ್ಲಿ ಒಂದು ಕಲ್ಲಿನಿಂದಲೇ ಮಾಡಿದ ಛತ್ರವನ್ನು ನಿರ್ಮಾಣ ಮಾಡಿಸಿದನು. ಜನಿವಾರದ ಕೆರೆ, ಸವಣೇರು ಕೆರೆ, ಬೆಕ್ಕದ ಬೃಹತ್ ಕೆರೆಗಳನ್ನು ನಿರ್ಮಿಸಿದನು, ಈಗಿನ ಬೆಳಗೊಳ ನಗರದ ಸ್ಥಾಪನೆಗೆ ಅಡಿಗಲ್ಲು ಹಾಕಿದವನೇ ಹುಳ್ಳರಾಜ. ಅವನು ಕಟ್ಟಿಸಿದ ಎರಡು ಮನೆಗಳು ಮುಂದೆ ಮಠವಾಗಿ, ಮನೆಗಳಾದವು. ಕೇವಲ ಒಂದು ಸಾಮಾನ್ಯ ಗ್ರಾಮದಂತಿದ್ದ ಶ್ರವಣಬೆಳಗೊಳ ಕೇಂದ್ರ ಭಾಗವು ಜನರ ಆವಾಸಸ್ಥಾನವಾಗಿ, ಧರ್ಮ ಸ್ಥಾನವಾಗಿ ಬೆಳೆಯುವಲ್ಲಿ ಹುಳ್ಳರಾಜನ ಇಚ್ಛಾಶಕ್ತಿಯೇ ಪ್ರಮುಖವಾಗಿತ್ತು ಎನ್ನಬಹುದಾಗಿದೆ.

ಹುಳ್ಳರಾಜನು ತಾನು ನಂಬಿದ ಧರ್ಮಕ್ಕಾಗಿ ಮಾಡಿದ ಚಿರ ಕಾರ್ಯಗಳಿಂದ ಬೆಳಗೊಳಕ್ಕೆ ದೊರಕಿದ ಭವ್ಯ ರತ್ನನೆನಿಸಿದ್ದಾನೆ. ಇವನ ಕಾರ್ಯಗಳಿಂದಾಗಿಯೇ ಇವನು ಕ್ರಿಯಾಪೂರ್ಣ ಸದ್ಗುಣ ಸಂಪನ್ನನು, ಜಿನವಾಣಿಯ ಪರಮ ಆರಾಧಕನು, ಬೆಳ್ದಾವರೆಯಂತೆ, ಹಂಸ ಪಕ್ಷಿಯಂತೆ ಧವಲ ಕೀರ್ತಿವಂತನಾಗಿ, ಜೈನ ಚೂಡಾಮಣಿಯಂತೆ ಇಂದಿಗೂ ಕಂಗೊಳಿಸುತ್ತಾನೆ. ಇತಿಹಾಸದ ಪುಟಗಳಲ್ಲಿ ಮರೆಯಾಗಿದ್ದರೂ, ಕನ್ನಡ ನಾಡಿನ ಮತ್ತು ಬೆಳಗೊಳದ ಜನರ ಮನದಲ್ಲಿ ಕರ್ತವ್ಯ ಭಂಡಾರಿ, ಧರ್ಮದ ಭಂಡಾರಿಯಾಗಿ, ಗೊಮ್ಮಟಪುರದ ಭೂಷಣವಾಗಿರುವ ಭಂಡಾರ ಬಸದಿಯ ಪರಿಸರದಲ್ಲಿ ಚಿರಸ್ಮರಣೀಯನಾಗಿ, ಪರಮ ಜೈನ ಶ್ರಾವಕನಾಗಿ ಬಸದಿಯ ಪ್ರಕಾರಗಳಲ್ಲಿ ನಿತ್ಯರೂಪನಾಗಿದ್ದಾನೆ.

ಲೇಖನ : ವೀರೇಂದ್ರ ಬೇಗೂರು.

### ಭಾವಪೂರ್ಣ ಶ್ರದ್ಧಾಂಜಲಿ



**ಪ್ರೊ. ನಿಟ್ಟೂರು ದೇವೇಂದ್ರ ಕುಮಾರ್**

ಸಂಸ್ಕೃತ ವಿದ್ವಾಂಸರು, ಮೈಸೂರು

ನಿಧನ : 06–10–2023

ಸರಳ ಸಜ್ಜನಿಕೆಯ ಪ್ರತೀಕವಾಗಿದ್ದ ನಿಮ್ಮ ಆತ್ಮಕ್ಕೆ ಸದ್ಗತಿ ಪ್ರಾಪ್ತಿಯಾಗಲೆಂದು ಪ್ರಾರ್ಥಿಸುವ :
ಧರ್ಮಪತ್ನಿ ಜಯಭಾರತಿ, ಪುತ್ರ ಆದರ್ಶ್ ಮತ್ತು ಅಭಿಲಾಶ್, ಸೊಸೆಯಂದಿರು ಜ್ಯೋತಿ ಮತ್ತು ನಿರೀಕ್ಷಾ, ಮೊಮ್ಮಗ ಸಮ್ಯಕ್ ಹಾಗೂ ನಿಟ್ಟೂರು ನೇಮಿರಾಜಯ್ಯನವರ ಕುಟುಂಬವರ್ಗ

### 25ನೇ ವರ್ಷದ ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ಟಿ.ಪಿ. ಪ್ರೇಮಲತ**

ನಿಧನ : 20–10–1998

ನೀವು ನಮ್ಮನ್ನೆಲ್ಲ ಅಗಲಿ 25 ವರ್ಷಗಳಾದವು. ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದೆ. ನೀವು ತೋರಿದ ಆದರ್ಶಗಳು ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುವ ಪತಿ ಟಿ.ಪಿ. ನಾಗಕುಮಾರಯ್ಯ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ, ಯಲಹಂಕ ಉಪನಗರ, ಬೆಂಗಳೂರು

### ವಿಜಯದಶಮಿಯಂದು ಲೋಕಾರ್ಪಣೆಗೊಳ್ಳಲಿರುವ ಗ್ರಂಥವು ರಿಯಾಯಿತಿ ದರದಲ್ಲಿ ಲಭ್ಯ

**ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಪ್ರಾಚೀನ ಜೈನ ನ್ಯಾಯಶಾಸ್ತ್ರ ಮತ್ತು ವ್ಯಾಕರಣ ಗ್ರಂಥಗಳ ಅನುವಾದ ಯೋಜನೆಯಡಿಯಲ್ಲಿ ಪ್ರೊ. ಕೆ. ಜೀವಂಧರಕುಮಾರ್ ಕೆ. ಹೊತಪೇಟೆ** ಅವರು **ಜೈನ್ ದರ್ಶನ್ ಮೆ ಅನೇಕಾಂತವಾದ : ಏಕ್ ಪರಿಶೀಲನ್** ಕೃತಿಯನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿರುತ್ತಾರೆ. ಶ್ರವಣಬೆಳಗೊಳದ ಜೈನ ಅಧ್ಯಯನ ಸಂಸ್ಥೆ (ರಿ.)ಯಿಂದ ಪ್ರಕಟಗೊಂಡಿದ್ದು, ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ವಿಜಯ ದಶಮಿಯಂದು ಲೋಕಾರ್ಪಣೆ ಮಾಡಲಿದ್ದಾರೆ. ಕೃತಿಯ ಬೆಲೆ ರೂ. 750–00 ಗಳಾಗಿದ್ದು, ರಿಯಾಯಿತಿ ದರದಲ್ಲಿ ರೂ. 600–00 ಗಳಿಗೆ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಜೈನ ಅಧ್ಯಯನ ಸಂಸ್ಥೆ(ರಿ.) ಮೊ: 9482810694 ಸಂಪರ್ಕಿಸಬಹುದು.

### ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಅ.6**: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯದ ಅರ್ಹ ಜೈನ ವಿದ್ಯಾರ್ಥಿಗಳಿಂದ 2023–24ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ 1ರಿಂದ 8ನೇ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸೌಲಭ್ಯ ಪಡೆಯಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (SSP) https://ssp.karnataka.gov.inನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳು ಕರ್ನಾಟಕದ ನಿವಾಸಿಯಾಗಿರಬೇಕು, ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ 50 ಶೇ. ಅಂಕಗಳನ್ನು ಗಳಿಸಿರಬೇಕು ಹಾಗೂ ಕುಟುಂಬದ ವಾರ್ಷಿಕ ಆದಾಯ ಒಂದು ಲಕ್ಷ ರೂ. ಒಳಗಿರಬೇಕು.

ಅರ್ಜಿ ಸಲ್ಲಿಸಲು **ನವೆಂಬರ್ 30** ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಇಲಾಖೆಯ ವೆಬ್ಸೈಟ್ https://dom.karnataka.gov.in ಗೆ ಭೇಟಿ ನೀಡಿ ಅಥವಾ ಸಹಾಯವಾಣಿ: 8277799990ಸಂಪರ್ಕಿಸುವಂತೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪುಣ್ಯಸ್ಮರಣೆ



**ಶ್ರೀಮತಿ ಲಕ್ಷ್ಮವ್ವ ಜಿನ್ನಪ್ಪ ಪದ್ಮೋಜಿ**

ಸಾ॥ ವೀರಾಪುರ

ಜನನ : 14–07–1947 ನಿಧನ : 05–10–2022

ಸಮ್ಮೇದ ಶಿಖರ್ಜಿ, ಶ್ರವಣಬೆಳಗೊಳ ಸೇರಿದಂತೆ ಹಲವಾರು ಪುಣ್ಯಕ್ಷೇತ್ರಗಳ ದರ್ಶನ ಮಾಡಿ ನೋಂಪಿ, ಉಪವಾಸಗಳನ್ನು ಮಾಡಿದ ನಿಮ್ಮ ಆದರ್ಶ ಜೀವನವು ನಮಗೆ ದಾರಿದೀಪವಾಗಿದೆ.

ಸದಾ ನಿಮ್ಮ ಸ್ಮರಣೆಯಲ್ಲಿ :
ಪತಿ, ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಪದ್ಮೋಜಿ ಕುಟುಂಬವರ್ಗದವರು

### ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಜ್ವಾಲನಯ್ಯ ಎಲ್.ಎ.**

ಲಕ್ಕವಳ್ಳಿ

ಜನನ : 1932 ನಿಧನ : 2023

ನೀವು ತೋರಿದ ಆದರ್ಶಗಳು ನಮಗೆ ದಾರಿದೀಪವಾಗಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುತ್ತೇವೆ.

ದುಃಖ ಭಾಗಿಗಳು
ಕುಟುಂಬ ವರ್ಗ ಮತ್ತು ಬಂಧು ಮಿತ್ರರು

### ಭಾವಪೂರ್ಣ ಶ್ರದ್ಧಾಂಜಲಿ



**ಶತಾಯುಷಿ ಶ್ರೀಮತಿ ಇಲ್ಕಲ್ ರಾಜಮ್ಮ**

(ದಿ. ಶ್ರೀ ಇಲ್ಕಲ್ ರಾಜಪ್ಪನವರು, ತಿಪಟೂರು ಇವರ ಧರ್ಮಪತ್ನಿ)

ನಿಧನ : 11–09–2023

ದುಃಖ ತಪ್ತರು
ಮಕ್ಕಳು, ಸೊಸೆಯಂದಿರು, ಮಗಳು, ಅಳಿಯ, ಮೊಮ್ಮಕ್ಕಳು, ಇಲ್ಕಲ್ ಕುಟುಂಬ ವರ್ಗ ಹಾಗೂ ಅಪಾರ ಬಂಧು–ಮಿತ್ರರು

### ಸಂಸ್ಕೃತ ವಿದ್ವಾಂಸ ಪ್ರೊಫೆಸರ್ ನಿಟ್ಟೂರು ದೇವೇಂದ್ರ ಕುಮಾರ್ ನಿಧನ

**ಮೈಸೂರು :** ಸರಳ ಸಜ್ಜನಿಕೆಯ ಪ್ರತೀಕವಾಗಿದ್ದ ಪ್ರೊ. ನಿಟ್ಟೂರು ದೇವೇಂದ್ರ ಕುಮಾರ್‌ರವರು 6–10–2023ರ ಶುಕ್ರವಾರ ಸ್ವರ್ಗಸ್ಥರಾದರು. ನಿಟ್ಟೂರಿನ ಪುರೋಹಿತ ಮನೆತನದ ಶ್ರೀಯುತರು ಪ್ರಾಥಮಿಕ ಹಂತದ ಶಿಕ್ಷಣವನ್ನು ಹೊಂಬುಜ ಹಾಗೂ ಶ್ರವಣಬೆಳಗೊಳದ ಬ್ರಹ್ಮಚರ್ಯಾಶ್ರಮಗಳಲ್ಲಿ ಪೂರೈಸಿ, ಮೈಸೂರು ಮಾನಸಗಂಗೋತ್ರಿಯಲ್ಲಿ ಸಂಸ್ಕೃತ ಎಂಎ ಪದವಿಯನ್ನು ಪಡೆದು ಮೈಸೂರಿನ ಜೆ.ಎಸ್.ಎಸ್ ಮಹಿಳಾ ಕಾಲೇಜಿನಲ್ಲಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ನಂತರ ಮೈಸೂರಿನ ಎಸ್.ಡಿ.ಎಂ. ಕಾಲೇಜಿನ ಸಂಸ್ಕೃತ ಉಪನ್ಯಾಸಕರಾಗಿ, ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದರು. ವೃತ್ತಿ ಜೀವನದೊಂದಿಗೆ ಧಾರ್ಮಿಕ ಉಪನ್ಯಾಸಗಳನ್ನು ನೀಡುವ ಮೂಲಕ ಕರ್ನಾಟಕ ಹಾಗೂ ಕೇರಳ ರಾಜ್ಯದ ಜೈನ ಸಮಾಜದಲ್ಲಿ ಚಿರಪರಿಚಿತರಾಗಿದ್ದರು. ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿಯೂ ಭಾಗವಹಿಸಿದ್ದರು. ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆ ಹಾಗೂ ಶ್ರವಣಬೆಳಗೊಳದ ಬಾಹುಬಲಿ ಪ್ರಾಕೃತ ವಿದ್ಯಾಪೀಠಗಳ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಧವಲ ಭಾಗ 5 ಮತ್ತು 12ರ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿರುತ್ತಾರೆ.

## ಸಲ್ಲೇಖನ ಪೂರ್ವಕ ಸಮಾಧಿ ಮರಣ




ಶ್ರೀ ಕ್ಷೇತ್ರ ಶ್ರವಣಬೆಳಗೊಳದ 2006 ಮತ್ತು 2018ರ ಭ. ಶ್ರೀ ಬಾಹುಬಲಿಸ್ವಾಮಿ ಮಹಾಮಸ್ತಕಾಭಿಷೇಕ ಮಹೋತ್ಸವದ ತ್ಯಾಗಿ ಸೇವಾ ಸಮಿತಿಯ ಅಧ್ಯಕ್ಷರಾಗಿದ್ದ ಮಹಾರಾಷ್ಟ್ರದ ಗೇವಾರಾಯಿ ನಿವಾಸಿಯಾದ ಶ್ರೀಪಾಲ್ ದೀಪಚಂದ್ ಗಂಗವಾಲ್‌ರವರು ಚಾರಿತ್ರ ಚಕ್ರವರ್ತಿ ಪ್ರಥಮಾಚಾರ್ಯ ಶ್ರೀ 108ಶಾಂತಿಸಾಗರ ಮಹಾರಾಜರ ಅಕ್ಷುಣ್ಣ ಪರಂಪರೆಯ ವರ್ತಮಾನ ಆಚಾರ್ಯ ಶ್ರೀ 108 ವರ್ಧಮಾನ ಸಾಗರ ಮಹಾರಾಜರ ಶಿಷ್ಯರಾದ ಪರಮಪೂಜ್ಯ ಮುನಿಶ್ರೀ 108 ಪುಣ್ಯಸಾಗರ ಮಹಾರಾಜರಿಂದ ಶಾಶ್ವತ ಸಿದ್ಧಕ್ಷೇತ್ರ ಶ್ರೀ ಸಮ್ಮೇದ ಶಿಖರ್ಜಿಯಲ್ಲಿ ದಿನಾಂಕ 04–08–2022 ರಲ್ಲಿ ಕ್ಷುಲ್ಲಕ ದೀಕ್ಷೆಯನ್ನು ಸ್ವೀಕರಿಸಿ ಪೂಜ್ಯ ಕ್ಷುಲ್ಲಕ ಶ್ರೀ ಐಶ್ವರ್ಯ ಸಾಗರ ಮಹಾರಾಜರಾದರು. ಪೂಜ್ಯರು 03–10–2023 ರಂದು ಮಧ್ಯಪ್ರದೇಶ ಶ್ರೀ ಸೋನಾಗಿರಿಯಲ್ಲಿ ಸಲೇಖನ ಸಮಾಧಿ ಮರಣ ಹೊಂದಿದರು.

## ಕೃತಿಗಳ ಲೋಕಾರ್ಪಣೆ

**ಬೆಳ್ತಂಗಡಿ :** ಅಕ್ಟೋಬರ್ 23ರಂದು ನಾರಾವಿಯ ಧರ್ಮಶ್ರೀ ಸಭಾಭವನದಲ್ಲಿ ಶಿಖರ್ಜಿಯಲ್ಲಿ ನಿರಂಜನನ ದರ್ಶನ ಮತ್ತು ಜಿನಭಕ್ತಿ ಲಹರಿ ಕೃತಿಗಳ ಲೋಕಾರ್ಪಣೆ ಸಮಾರಂಭವು ಜರುಗಲಿದೆ. ಪ.ಪೂ. ಭಾರತಭೂಷಣ ಸ್ವಸ್ತಿಶ್ರೀ ಡಾ. ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಕೃತಿಗಳನ್ನು ಲೋಕಾರ್ಪಣೆ ಮಾಡಲಿದ್ದು, ಗೌರವಾನ್ವಿತ ಅತಿಥಿಗಳಾಗಿ ಧರ್ಮಸ್ಥಳ ಸುರೇಂದ್ರ ಕುಮಾರ್ ಮತ್ತು ಅಧ್ಯಕ್ಷತೆಯನ್ನು ಡಾ. ನೀರಜಾ ನಾಗೇಂದ್ರಕುಮಾರ್ ವಹಿಸಲಿದ್ದಾರೆ.


## ಐಆರ್‌ಸಿಟಿಸಿ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ನೇಮಕ



**ನವದೆಹಲಿ :** ಭಾರತೀಯ ರೈಲ್ವೆ ಕ್ಯಾಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮ ನಿಯಮಿತ (ಐಆರ್‌ಸಿಟಿಸಿ) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ **ಸಂಜಯ್ ಕುಮಾರ್ ಜೈನ್** ಅವರು ನೇಮಕಗೊಂಡಿರುತ್ತಾರೆ.

1990ರ ಬ್ಯಾಚಿನ ಐಆರ್‌ಸಿಟಿಸಿ ಅಧಿಕಾರಿಯಾಗಿರುವ ಶ್ರೀಯುತರು ಉತ್ತರ ರೈಲ್ವೆಯಲ್ಲಿ ಪ್ರಧಾನ ಮುಖ್ಯ ವಾಣಿಜ್ಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಹಿಂದೆ ಅವರು ಭಾರತ ಸರ್ಕಾರದ ಸಾರ್ವಜನಿಕ ಉದ್ಯಮಗಳ ಇಲಾಖೆಯ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

## ವಿ. ಶ್ವೇತಾಗೆ ಪಿಎಚ್.ಡಿ. ಪದವಿ



**ಬೆಂಗಳೂರು. ಅ.1 :** ವಿ. ಶ್ವೇತಾರವರು ಎಲೆಕ್ಟ್ರಿಕ್ ಮತ್ತು ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನ ಪ್ರಬಂಧಕ್ಕೆ ಪಿಎಚ್.ಡಿ ಪದವಿಗೆ ಭಾಜನರಾಗಿದ್ದು, ಬೆಳಗಾವಿಯಲ್ಲಿ ಜರುಗಿದ ಘಟಿಕೋತ್ಸವದಲ್ಲಿ ಪದವಿ ಸ್ವೀಕರಿಸಿರುತ್ತಾರೆ.

## ತಂಡಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



**ತಂಡಗ, ಅ. 1 :** ಮಹಾವೀರ ದಿಗಂಬರ ಜೈನ ಸಮಾಜ ಮತ್ತು ಕೂಷ್ಮಾಂಡಿನಿ ಮಹಿಳಾ ಸಮಾಜದ ವತಿಯಿಂದ ಜರುಗಿದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಬೆಂಗಳೂರಿನ ಡಾ. ಅಶ್ವಿನಿ ಅಶೋಕ್ ಕುಮಾರ್ ಮತ್ತು ಡಾ. ಅಶೋಕುಮಾರ್‌ರವರು ಆರೋಗ್ಯ ತಪಾಸಣೆ ನಡೆಸಿ ಔಷಧಿಗಳನ್ನು ನೀಡಿದರು. ನಂತರ ಜರುಗಿದ ಕಾರ್ಯಕ್ರಮ–ದಲ್ಲಿ ದಶಲಕ್ಷಣ ಪರ್ವದ ಬಗ್ಗೆ ಉಪನ್ಯಾಸ ನೀಡಿದರು. ಡಾ. ರತ್ನರಾಜುರವರು ಸರಳ ಜೀವನದಿಂದ ನೆಮ್ಮದಿಯಾಗಿ ಜೀವನ ಸಾಗಿಸಬಹುದೆಂದು ತಿಳಿಸಿದರು. ಈ ಸಂದರ್ಭದಲ್ಲಿ ಸಮಾಜದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಹಾವೇರಿಯಲ್ಲಿ ಪ್ರವಚನ ಮಂದಿರ ಹಾಗೂ ಡಿ.ವೀರೇಂದ್ರ ಹೆಗ್ಗಡೆ ಸಭಾಭವನ ಉದ್ಘಾಟನೆ



**ಹಾವೇರಿ: ಸೆ.27:** ಬ್ರಹ್ಮಚಾರಿ ಶ್ರೀ ಸೋಮಣ್ಣ ಮರಿತಮ್ಮಪ್ಪ ಕಳಸೂರ ಪ್ರವಚನ ಮಂದಿರ ಹಾಗೂ ರಾಜರ್ಷಿ ಡಾ. ಡಿ.ವೀರೇಂದ್ರ ಹೆಗ್ಗಡೆ ಸಭಾಭವನದ ಉದ್ಘಾಟನಾ ಸಮಾರಂಭ ಇತ್ತೀಚೆಗೆ ಹಾವೇರಿ ನಗರದ ದಿಗಂಬರ ಜೈನ ಮಂದಿರದಲ್ಲಿ ಜರುಗಿತು. ಕಂಬದಹಳ್ಳಿ ಜೈನಮಠದ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಹಾಗೂ ಸಿಂಹನಗದ್ದೆ ಬಸ್ತಿಮಠದ ಪ.ಪೂ. ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿ ಉದ್ಘಾಟಿಸಿದರು. ಶ್ರೀ ನೇಮಿನಾಥ ದಿಗಂಬರ ಜಿನಮಂದಿರ ಕಮಿಟಿ ಅಧ್ಯಕ್ಷ ಚಂದ್ರನಾಥ ಕಳಸೂರ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಿಶೇಷಾಧಿಕಾರಿ ಡಾ.ಅಜಿತ ಮುರುಗುಂಡೆ, ಹಾವೇರಿ ಶ್ರೀ ಆದಿನಾಥ ಜೈನ ಶ್ವೇತಾಂಬರ ಸಂಘದ ಅಧ್ಯಕ್ಷ ಸುಭಾಸ ಜೈನ, ಹಾವೇರಿ ಜಿಲ್ಲಾ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನಿರ್ದೇಶಕ ನಾಗರಾಜ ಶೆಟ್ಟಿ ಹಾಗೂ ರತ್ನತ್ರಯ ಮಹಿಳಾ ಮಂಡಳ ಅಧ್ಯಕ್ಷೆ ಆರತಿ ಮಹಾವೀರ ಹಜಾರಿ ಅವರು ಪಾಲ್ಗೊಂಡಿದ್ದರು. ಹಾವೇರಿ ಶ್ರೀಮತಿ ವೀಣಾ ಚಂದ್ರನಾಥ ಕಳಸೂರ ಚಾರಿಟೇಬಲ್ ಟ್ರಸ್ಟ್ ವತಿಯಿಂದ 14 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಮಹಾವೀರ ಅಲ್ಪಸಂಖ್ಯಾತರ ಅರ್ಬನ್ ಕೋ ಆಫ್ ಕ್ರೆಡಿಟ್ ಸೊಸೈಟಿಯ ರಜತಮಹೋತ್ಸವ ಆಚರಣೆಯು ನೆರವೇರಿತು.

## ಜೈನ ಅಭಿವೃದ್ಧಿ ನಿಗಮ ಸ್ಥಾಪನೆಗೆ ಅಗತ್ಯ ಕ್ರಮ



**ಬೆಳಗಾವಿ, ಸೆ.27 :** ಜೈನ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭರವಸೆ ನೀಡಿದ್ದಾರೆ. ಬೆಳಗಾವಿಯ ಹಲಗಾ ಗ್ರಾಮದಲ್ಲಿ ಜೈನ ಯುವ ಸಂಘಟನೆ ವತಿಯಿಂದ ಆಯೋಜಿಸಲಾಗಿದ್ದ ಶಾಂತಿಸಾಗರ ಸಂಸ್ಕಾರ ಬಂಧನ ಶಿಬಿರ ಹಾಗೂ ಪಂಚಾಮೃತ ಪೂಜಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಜೈನ ಸಮಾಜ ಅಹಿಂಸೆಯ ತತ್ವದ ಆಧಾರದ ಮೇಲೆ ನಡೆಯುತ್ತಾ ಬಂದಿದೆ. ಇಂದು ಈ ಸಂಸ್ಕಾರ ಬಂಧನ ಶೋಭಾಯಾತ್ರೆಯಲ್ಲಿ ಭಾಗವಹಿಸಿದ ನಂತರ ಜೈನ ಧರ್ಮದ ಬಗ್ಗೆ ಇನ್ನಷ್ಟು ಹೆಚ್ಚಿನ ಜ್ಞಾನ ಪಡೆದುಕೊಂಡಂತಾಗಿದೆ.

ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂಬುದು ಜೈನ ಸಮಾಜದ ಹಲವು ದಿನಗಳ ಬೇಡಿಕೆಯಾಗಿದೆ. ಆ. ಶ್ರೀ ಸಿದ್ಧಸೇನ ಮುನಿ ಮಹಾರಾಜರು ಮತ್ತು ಇನ್ನಿತರ ಸ್ವಾಮೀಜಿಯವರು ಹಾಗೂ ಸಮಾಜದ ಪ್ರಮುಖರು ಈ ಬಗ್ಗೆ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಂಡಿದ್ದು, ಈ ಮನವಿಯನ್ನು ಆಧರಿಸಿ ಈಗಾಗಲೇ ನಿಗಮ ಸ್ಥಾಪನೆಯ ಪ್ರಸ್ತಾವನೆಯನ್ನು ಮುಖ್ಯಮಂತ್ರಿ ಕಛೇರಿಗೆ ಕಳುಹಿಸಲಾಗಿದ್ದು, ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಅವರು ತಿಳಿಸಿದರು.

## ಆದರ್ಶ ಜೈನ ಮಹಿಳಾರತ್ನ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ






**ಬೆಂಗಳೂರು. ಅ. 1 :** ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಕೊಡಮಾಡುವ 2023ನೇ ಸಾಲಿನ **'ಆದರ್ಶ ಜೈನ ಮಹಿಳಾರತ್ನ ಪ್ರಶಸ್ತಿ'**ಯನ್ನು ನಗರದ ಕರ್ನಾಟಕ ಜೈನ ಭವನದಲ್ಲಿ ಮೈಸೂರಿನ ಖ್ಯಾತ ಸಾಹಿತಿ ಡಾ॥ ಸರಸ್ವತಿ ವಿಜಯಕುಮಾರ್ ಅವರಿಗೆ ಭಾರತೀಯ ಜೈನ ಮಿಲನ್‌ನ ಕಾರ್ಯಾಧ್ಯಕ್ಷೆ ಅನಿತಾ ಸುರೇಂದ್ರ ಕುಮಾರ್ ಅವರು ಪ್ರದಾನ ಮಾಡಿದರು. ಇದೇ ಸಂದರ್ಭದಲ್ಲಿ ಟ್ರಸ್ಟಿನ 35ನೇ ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ 168 ಜೈನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಧರ್ಮಸ್ಥಳ ಸುರೇಂದ್ರಕುಮಾರ್ ಮಕ್ಕಳ ಹೃದಯ ತಜ್ಞೆ ಡಾ॥ ವಿಜಯಲಕ್ಷ್ಮಿ ಐ. ಬಾಳೇಕುಂದ್ರಿ, ಹಿರಿಯ ಪತ್ರಕರ್ತರಾದ ಡಾ॥ ಪದ್ಮರಾಜ ದಂಡಾವತಿ, ಅಜಿತ್ ಹನುಮಕ್ಕನವರ್, ಕೆ. ರತ್ನಾಕರ, ನವೀನ್ ಖಾರಿವಾಲ್, ಶುಭಾಷ್ ಪಿ. ಜಿನಗೌಡ ಟ್ರಸ್ಟ್‌ನ ಚೇರ್ಮನ್ ಎಸ್. ಜಿತೇಂದ್ರಕುಮಾರ್, ವ್ಯವಸ್ಥಾಪಕ ಧರ್ಮದರ್ಶಿ ಜಿ.ಪಿ. ನಾಗೇಂದ್ರ ಪ್ರಸಾದ್‌ರವರುಗಳು ಉಪಸ್ಥಿತರಿದ್ದರು.

## ತೌಳವ ಇಂದ್ರ ಸಮಾಜದ ನೂತನ ಪದಾಧಿಕಾರಿಗಳ ಪದಸ್ವೀಕಾರ ಸಮಾರಂಭ




**ಮೂಡಬಿದ್ರಿ. ಅ. 3 :** ತೌಳವ ಇಂದ್ರ ಸಮಾಜ (ರಿ)ದ ಮಹಾಸಭೆ ಹಾಗೂ ನೂತನ ಪದಾಧಿಕಾರಿಗಳ ಪದಸ್ವೀಕಾರ ಸಮಾರಂಭವು ಪಟ್ಟಣದ ಶ್ರೀ ಧವಲಾ ಕಾಲೇಜಿನ ಮಾತೃಶ್ರೀ ಸಭಾಭವನದಲ್ಲಿ ನಡೆಯಿತು. ಜಗತ್ಪಾಲ ಇಂದ್ರ, ಬಿ. ಪ್ರಮೋದ್ ಕುಮಾರ್ ಹಾಗೂ ಬಿ.ವಿಜಯ ಕುಮಾರಿ ಬೆಟ್ಕೇರಿ ಹಾಗೂ ಪ್ರತಿಷ್ಠಾಚಾರ್ಯ ಉಪಾದಿ ಪಡೆದ ಪುರೋಹಿತ ಪದ್ಮಪ್ರಭ ಇಂದ್ರ ಅಳದಂಗಡಿ ಅವರನ್ನು ಗೌರವಿಸಲಾಯಿತು. ನೂತನ ಅಧ್ಯಕ್ಷರಾಗಿ ಜ್ಞಾನಚಂದ್ರ ಇಂದ್ರ, ಉಪಾಧ್ಯಕ್ಷರುಗಳಾಗಿ ಎಂ.ಅಕ್ಷಯ ಕುಮಾರ್ ಮತ್ತು ಶ್ರೀಮತಿ ದಿವ್ಯಾ ವಿ. ಕೆ., ಕಾರ್ಯದರ್ಶಿಯಾಗಿ ಬಿ.ಅಭಯ ಕುಮಾರ್, ಕೋಶಾಧಿಕಾರಿಯಾಗಿ ಶ್ರೀಮತಿ ವಿಜಯಾ ಕುಮಾರಿ ಇಂದ್ರ, ಕಾರ್ಯದರ್ಶಿಯಾಗಿ ಸುಕುಮಾರ್ ಇಂದ್ರ ಹಾಗೂ ಸುವಿಧಿ ಇಂದ್ರ ಪದಸ್ವೀಕಾರ ಮಾಡಿದರು. ಹತ್ತನೇ ತರಗತಿ ಹಾಗೂ ದ್ವಿತೀಯ ಪಿ.ಯು.ಸಿ.ಯ ಪ್ರತಿಭಾವಂತರಿಗೆ ವಿದ್ಯಾರ್ಥಿ ಪುರಸ್ಕಾರ ನೀಡಲಾಯಿತು.

## ಪ.ಪೂ. ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ದತ್ತಿನಿಧಿ ಪ್ರಶಸ್ತಿ ಪ್ರದಾನ



**ಕಾರ್ಕಳ : ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ** ದತ್ತಿನಿಧಿ ಪ್ರಶಸ್ತಿಯನ್ನು ಶ್ರೀ ಬಾಹುಬಲಿ ಶ್ರಾವಿಕಾಶ್ರಮದ ಅಂತಿಮ ಪದವಿ ವಿದ್ಯಾರ್ಥಿನಿ ಕಳಸದ ಕು. ಸುರಕ್ಷಾ ಕೆ.ಎಸ್. ಇವರಿಗೆ ಖ್ಯಾತ ಸಾಹಿತಿ ಮುನಿರಾಜ ರೆಂಜಾಳರು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಆಶ್ರಮದ ಟ್ರಸ್ಟಿಗಳಾದಮಾಲತಿ ವಸಂತ ರಾಜ್, ಸುಮಾಲಿನಿ ವಿಜಯಕುಮಾರ್, ಜಯಲಕ್ಷ್ಮೀ ಅಜಿತ್ ಕುಮಾರ್, ಧರ್ಮಸ್ಥಳದ ಶಿಶುಪಾಲ್ ಪೂವಣಿ ಮೊದಲಾದವರು ಉಪಸ್ಥಿತರಿದ್ದರು.






॥ ಶ್ರೀ ವೀತರಾಗಾಯ ನಮಃ ॥ ॥ ಶ್ರೀ ಗೋಮಟೇಶಾಯ ನಮಃ ॥

## ಆಹ್ವಾನ ಪತ್ರಿಕೆ

ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಪ್ರತಿವರ್ಷದಂತೆ

## ಶರನ್ನವರಾತ್ರಿ ವಿಶೇಷ ಪೂಜಾ ಕಾರ್ಯಕ್ರಮ

ಧರ್ಮಬಂಧುಗಳೇ,

ಅಂತಿಮ ಶ್ರುತಕೇವಲಿ ಆಚಾರ್ಯಶ್ರೀ ಭದ್ರಬಾಹು ಸ್ವಾಮಿ ಹಾಗೂ ಮೌರ್ಯ ಸಾಮ್ರಾಟ್ ಚಂದ್ರಗುಪ್ತರ ಸಲ್ಲೇಖನ ಪೂರ್ವಕ ಸಮಾಧಿಯಿಂದ ಪ್ರಸಿದ್ಧ ಪುಣ್ಯ ಕ್ಷೇತ್ರ ಚಂದ್ರಗಿರಿ ಹಾಗೂ ಉತ್ತುಂಗ ಭವ್ಯ **ಗೋಮಟೇಶ್ವರ ಭ. ಶ್ರೀ ಬಾಹುಬಲಿ ಸ್ವಾಮಿ**ಯ ಪ್ರತಿಮೆ ಶೋಭಿತ ಅತಿಶಯ ಕ್ಷೇತ್ರ ಶ್ರೀ ವಿಂಧ್ಯಗಿರಿಗಳಿಂದ ಸುಶೋಭಿತ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ
**ಚಾತುರ್ಮಾಸ ನಿರತ ಪರಮಪೂಜ್ಯ 16 ಸಾಧು ವೃಂದದ ಸಾನ್ನಿಧ್ಯ** ಹಾಗೂ
**ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀಮದಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ**ಯವರ ನೇತೃತ್ವದಲ್ಲಿ ಶೋಭಕೃತ್ ನಾಮ ಸಂವತ್ಸರ ಆಶ್ವೀಜ ಮಾಸ, ಶುಕ್ಲ, ದಿನಾಂಕ: **15-10-2023** ರಿಂದ ದಿನಾಂಕ : **24-10-2023**ರ ವರೆಗೆ **ಶರನ್ನವರಾತ್ರಿ ವಿಶೇಷ ಪೂಜಾ ಕಾರ್ಯಕ್ರಮಗಳು** ಆಯೋಜಿತಗೊಂಡಿದ್ದು, ಈ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಶ್ರೀ ಸರಸ್ವತಿ ಅಮ್ಮನವರಿಗೆ ಅಭಿಷೇಕ, ಷೋಡಶೋಪಚಾರ ಪೂಜೆ ಹಾಗೂ ಅಷ್ಟಾವಧಾನ ಕಾರ್ಯಕ್ರಮಗಳು ಸಂಪನ್ನಗೊಳ್ಳಲಿವೆ.

### ಕಾರ್ಯಕ್ರಮಗಳು

**ಪ್ರತಿ ದಿನ ಬೆಳಗ್ಗೆ 07.00 ಕ್ಕೆ** : ಶ್ರೀ ಮಠದ ಬಸದಿಯಲ್ಲಿ ಶ್ರೀ ಸರಸ್ವತಿದೇವಿಗೆ ವಿಶೇಷ ಪಂಚಾಮೃತ ಅಭಿಷೇಕ

**ಸಂಜೆ 07.00 ಕ್ಕೆ** : ಶ್ರೀ ಮಠದ ಬಸದಿಯಲ್ಲಿ ಶ್ರೀ ಸರಸ್ವತಿದೇವಿಗೆ ವಿಶೇಷ ಅಲಂಕಾರ, ಷೋಡಶೋಪಚಾರ ಪೂಜೆ ಹಾಗೂ ಅಷ್ಟಾವಧಾನ ಕಾರ್ಯಕ್ರಮಗಳು.
ದಿನಾಂಕ : 24-10-2023 ರಂದು ನವದೇವತೆಗಳ ವಿಶೇಷ ಅಲಂಕಾರ ಪೂಜಾ ಕಾರ್ಯಕ್ರಮ.

ದಿನಾಂಕ: 23-10-2023 ರಂದು
ನವಮಿ ಪ್ರಯುಕ್ತ **ಆಯುಧಪೂಜಾ** ಕಾರ್ಯಕ್ರಮ
ದಿನಾಂಕ : 24-10-2023 ರಂದು ವಿಜಯದಶಮಿ ಪ್ರಯುಕ್ತ
**ಶ್ರೀ ಆಮ್ರ ಕೂಷ್ಮಾಂಡಿನಿದೇವಿ ಉತ್ಸವ** ಹಾಗೂ
**ಶಮಿವೃಕ್ಷ ಪೂಜೆ (ಬನ್ನಿ ಪೂಜೆ)**

### ಸರ್ವರಿಗೂ ಹಾರ್ದಿಕ ಸುಸ್ವಾಗತ

| ಕಾರ್ಯಕ್ರಮ ಆಯೋಜಕರು | ಅಧ್ಯಕ್ಷರು ಮತ್ತು ಸದಸ್ಯರು | ಅಧ್ಯಕ್ಷರು ಮತ್ತು ಸದಸ್ಯರು |
|---|---|---|
| ಎಸ್‌ಡಿಜೆಎಂಐಎಂಸಿ ಟ್ರಸ್ಟ್ (ರಿ) | ಶ್ರೀ ದಿಗಂಬರ ಜೈನ ಸಮಾಜ | ಶ್ರೀ ಕೂಷ್ಮಾಂಡಿನಿ ಮಹಿಳಾ ಸಮಾಜ |
| ಶ್ರೀಕ್ಷೇತ್ರ ಶ್ರವಣಬೆಳಗೊಳ | ಶ್ರೀಕ್ಷೇತ್ರ ಶ್ರವಣಬೆಳಗೊಳ | ಶ್ರೀಕ್ಷೇತ್ರ ಶ್ರವಣಬೆಳಗೊಳ |

CONTACT : ವ್ಯವಸ್ಥಾಪಕರು
**9844143722**

ಶ್ರೀಕ್ಷೇತ್ರದಲ್ಲಿನ ಈ ಎಲ್ಲಾ ಪ್ರತಿನಿತ್ಯದ ಪೂಜಾ ಕಾರ್ಯಕ್ರಮವನ್ನು ಆನ್‌ಲೈನ್ ಲೈವ್ ಈ ಲಿಂಕ್‌ಗೆ ಹೋಗಿ ವೀಕ್ಷಿಸಬಹುದು

SRI KSHETHRA SHRAVANABELAGOLA

## ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ



**ಶ್ರವಣಬೆಳಗೊಳ. ಅ. 2** : ಅಂಬಿಕಾ ಶಾಲೆಯಲ್ಲಿ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಮತ್ತು ಶಾರದಾ ಪೂಜೆ ಹಾಗೂ ಸ್ವಚ್ಛತಾ ಕಾರ್ಯಕ್ರಮ ನೆರವೇರಿತು. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಬಬನ್ ಪಾರಿಸ ದಾತವಾಡೆ, ಮುಖ್ಯ ಶಿಕ್ಷಕ ಡಿ.ಪುಷ್ಪರಾಜ್, ಶಾಲೆಯ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

## ಅಂಬಿಕಾ ಶಾಲೆಯ ಹಳೆಯ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನ ಕೊಡುಗೆ



**ಶ್ರವಣಬೆಳಗೊಳ** : ಅಂಬಿಕಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ 8ನೇ ತರಗತಿಯ 4 ವಿದ್ಯಾರ್ಥಿಗಳಿಗೆ ತಲಾ 2,500 ರೂಗಳಂತೆ ಒಟ್ಟು 10,000 ರೂಗಳನ್ನು ವಿದ್ಯಾರ್ಥಿವೇತನವಾಗಿ ನೀಡಿದರು. ಹಳೆಯ ವಿದ್ಯಾರ್ಥಿಗಳ ಸಂಘದ ಹೇಮಂತ್, ಕಿರಣ್, ಶ್ರವಣ್, ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಎಲ್ಲಾ ಶಿಕ್ಷಕ, ಶಿಕ್ಷಕಿಯರು ಭಾಗವಹಿಸಿದ್ದರು. ಶಾಲೆಯ ವತಿಯಿಂದ ಅಭಿನಂದನೆ ತಿಳಿಸಲಾಯಿತು.

## ಕೃತಿಗಳಿಗೆ ಶೇ 50 ರಿಯಾಯಿತಿ

ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ-ಯವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಎಸ್‌ಡಿಜೆಎಂಐಎಂಸಿ (ರಿ.) ಜೈನ ಅಧ್ಯಯನ ಸಂಸ್ಥೆ (ರಿ.)ಯಿಂದ 50ಕ್ಕೂ ಹೆಚ್ಚು ಜೈನ ಧಾರ್ಮಿಕ, ಸಂಶೋಧನಾತ್ಮಕ, ಐತಿಹಾಸಿಕ ಕೃತಿಗಳು ಪ್ರಕಟಣೆ-ಗೊಂಡಿದ್ದು, ಶೇ. 50ರ ರಿಯಾಯಿತಿ ದರದಲ್ಲಿ ಲಭ್ಯವಿರುತ್ತವೆ. ಸ್ವಾಧ್ಯಾಯ ಪ್ರಿಯರು, ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬಹುದು.
ಹೆಚ್ಚಿನ ಮಾಹಿತಿಗಾಗಿ ಜೈನ ಅಧ್ಯಯನ ಸಂಸ್ಥೆಯ ನಿರ್ದೇಶಕರನ್ನು (ಮೊ: 9482810694) ಸಂಪರ್ಕಿಸಬಹುದು.

**ಶ್ರೀಲಂಕಾ ಪ್ರವಾಸ ರಾಮಾಯಣ ದರ್ಶನಂ**
ಪ್ರವಾಸ ದಿ: 23-12-2023 ರಿಂದ 02-01-2024. ಸೀಟೊಂದಕ್ಕೆ
ರೂ. 62000 ★★ ರೂ. 67000 ★★★
ಬುಕಿಂಗ್ ಕೊನೆ ದಿ: 12-10-2023
ಬೆಳಗಾವಿಯಿಂದ ಕೊಲಂಬೊ-ಚಿಲ್ಲಾ-ಸಿಗರಿಯಾ-ಟ್ರಿಕೋಮಲಿ (ಶಂಕರದೇವಿ ಶಕ್ತಿಪೀಠ)-ಅನುರಾಧಪುರ-ಕ್ಯಾಂಡಿ-ನುವೇರಾ ಇಲಿಯಾ-ಬಿಂಟೋಟಾ-ಅಶೋಕ ವಾಟಿಕಾ-ಸೀತಾಗ್ನಿ ಪರೀಕ್ಷಾ ಇತ್ಯಾದಿ.
ರೇಲ್ವೆ-ವಿಮಾನ ಪ್ರವಾಸ-2-3 ಸ್ಟಾರ್ ಹೋಟೇಲ
**ಬದ್ರಿನಾಥ ಯಾತ್ರ ಸಂಘ**
ಬೆಳಗಾವಿ 9448347054

## ಸಮಾಜಮುಖಿ ರಂಗಬಳಗದ ಕಲಾವಿದರಿಂದ ‘ಚಾವುಂಡರಾಯ’ ನಾಟಕ ಪ್ರದರ್ಶನ



ಶ್ರವಣಬೆಳಗೊಳ. ಅ.7 : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ದಿಗಂಬರ ಜೈನ ಮಠದ ಸಹಯೋಗದೊಂದಿಗೆ ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಗೌರವ ಸ್ಮರಣೆಯಲ್ಲಿ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ನೇತೃತ್ವದಲ್ಲಿ ಚಾವುಂಡರಾಯ ಸಭಾಮಂಟಪದಲ್ಲಿ ಸಮಾಜಮುಖಿ ರಂಗಬಳಗದ ಕಲಾವಿದರಿಂದ ಚಾವುಂಡರಾಯ ನಾಟಕ ಪ್ರದರ್ಶನಗೊಂಡಿತು.

ಜಯರಾಮ್ ರಾಯಪುರರವರು ರಚಿಸಿರುವ, ಹುಲಗಪ್ಪ ಕಟ್ಟಿಮನಿ ನಿರ್ದೇಶನದ ಗಂಗರಸರ ಕಡೆಗಾಲದ ಹೃದ್ಯ ಚಿತ್ರಣವಿರುವ ಚಾವುಂಡರಾಯ ಎಂಬ ಐತಿಹಾಸಿಕ ನಾಟಕ ಪ್ರೇಕ್ಷಕರ ಮನಸೂರೆಗೊಂಡಿತು. ಪ.ಪೂ. ಯುಗಳ ಮುನಿಗಳಾದ ಮುನಿಶ್ರೀ ಅಮೋಘ ಕೀರ್ತಿ ಮಹಾರಾಜರು, ಪ.ಪೂ. ಮುನಿಶ್ರೀ ಅಮರಕೀರ್ತಿ ಮಹಾರಾಜರು, ಪ.ಪೂ. ಜಗದ್ಗುರು ಅಭಿನವ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು, ಕಂಬದಹಳ್ಳಿಯ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ನಾಟಕವನ್ನು ವೀಕ್ಷಿಸಿದರು. ನಂತರ ಎಲ್ಲಾ ಕಲಾವಿದರಿಗೆ ಶ್ರೀಮಠದ ವತಿಯಿಂದ ಗೌರವಿಸಲಾಯಿತು.

## 900 ವರ್ಷಗಳ ಪುರಾತನ ಬಸದಿಯ ಸ್ವಚ್ಛತೆ, ಮಣ್ಣಿನಲ್ಲಿ ಹುದುಗಿದ್ದ ತೀರ್ಥಂಕರರ ಮೂರ್ತಿ ಹಾಗೂ ಶಾಸನ ಪತ್ತೆ



ಮೊದಲು





ನಂತರ







ಶ್ರವಣಬೆಳಗೊಳ. ಅ. 8: ಹೋಬಳಿಯ ಸಾಣೇನಹಳ್ಳಿ ಗ್ರಾಮದಲ್ಲಿ ಪಾಳು ಬಿದ್ದಿದ್ದ 900 ವರ್ಷಗಳ ಪುರಾತನ ಬಸದಿಯನ್ನು ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ನೇತೃತ್ವದಲ್ಲಿ ಸ್ವಚ್ಛಗೊಳಿಸಲಾಯಿತು. ಈ ಬಸದಿಯ ನಿರ್ಮಾಣದ ಬಗ್ಗೆ ಕ್ರಿ.ಶ. 1120 ರ ಜಕ್ಕವ್ವೆಯ ದತ್ತಿ ಶಾಸನ ಹಾಗೂ ಬಸದಿ ನಿರ್ಮಾಣ ಶಾಸನದಲ್ಲಿ ಉಲ್ಲೇಖವಿದೆ. ಈ ಬಸದಿ ಗಿಡ ಗಂಟೆಗಳು ಬೆಳೆದು, ಸಂಪೂರ್ಣವಾಗಿ ಪಾಳು ಬಿದ್ದಿತ್ತು. ಇದನ್ನು ಮನಗಂಡ ಅಭಿನವ ಚಾರುಶ್ರೀಗಳು ಶ್ರವಣಬೆಳಗೊಳದ ಯುವಕ ಸಂಘ, ಆಶ್ರಮದ ವಿದ್ಯಾರ್ಥಿಗಳು ಹಾಗೂ ಸಾಣೇನಹಳ್ಳಿ ಗ್ರಾಮಸ್ಥರ ಸಹಕಾರದಿಂದ ಬಸದಿಗೆ ಪುನರುಜ್ಜೀವ ನೀಡಲು ಮುಂದಾಗಿದ್ದಾರೆ. ಇದೇ ವೇಳೆ ಸಾಣೆನಹಳ್ಳಿ ಕೆರೆಯ ದಡದಲ್ಲಿ ಮಣ್ಣಿನಲ್ಲಿ ಹುದುಗಿದ್ದ ಭಿನ್ನವಾಗಿರುವ ತೀರ್ಥಂಕರರ ಮೂರ್ತಿ ದೊರೆಕಿದೆ. ಈ ವಿಗ್ರಹವನ್ನು ಹೊರತೆಗೆದು ಶ್ರೀಮಠಕ್ಕೆ ತಂದು ಸಂರಕ್ಷಿಸಲಾಗಿದೆ ಹಾಗೂ ಗ್ರಾಮಸ್ಥರ ಜಮೀನಿನಲ್ಲಿ ಒಂದು ಶಾಸನವು ದೊರೆತಿದ್ದು, ಈ ಶಾಸನವು ಗಂಗವಾಡಿ ಗೋವಿಂದವಾಡಿ ದತ್ತಿ ಶಾಸನವಾಗಿದೆಯೆಂದು, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ಡಾ. ಎಸ್.ವಿ. ಮುರಳಿ, ಹಜಾರಿ ಪಾರ್ಶ್ವನಾಥ್ ಹಾಗೂ ಮಹಾವೀರ್ ಆರ್.ಟಿ. ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ತಿಳಿಸಿದರು.

Edited, Printed & Published by : Charukeerthi Bhattaraka Swamiji and Owned by Shri Digambar Jain Matha, S.D.J.M.I. Managing Committee Trust (R), Shravanabelagola-573 135.
Printer : Omkar Offset Printers, Bangalore Email : gommatavani1980@gmail.com Gommatavani Office Contact No. : 8660118443